ಅಖಿಲ ಕರ್ನಾಟಕ

# ಶಿಕ್ಷಕ ಸಮಾಚಾರ

ಜೂನ್ 2014 ಮಾಸ ಪತ್ರಿಕೆ

ಸಂಪುಟ : 36
ಸಂಚಿಕೆ : 9
ಪುಟ : 12
ಬೆಲೆ : ₹ 5/-




A Journal of Karnataka State Secondary Teachers' Association

# ಸಂಪಾದಕೀಯ

ಪ್ರಜಾಪ್ರಭುತ್ವದಲ್ಲಿ ಐದು ವರ್ಷಗಳಿಗೊಮ್ಮೆ ಚುನಾವಣೆಗಳು ನಡೆಯುತ್ತವೆ. ಸರ್ಕಾರಗಳು ಬದಲಾಗುತ್ತವೆ. ಹಾಗೆಯೇ ಇತ್ತೀಚೆಗೆ ಲೋಕಸಭಾ ಚುನಾವಣೆಗಳು ನಡೆದು ದೇಶದ ಜನರ ನಿರೀಕ್ಷೆಗೆ ಅನುಗುಣವಾಗಿ ಶ್ರೀನರೇಂದ್ರಮೋದಿಯವರ ಸರ್ಕಾರ ಅಧಿಕಾರಕ್ಕೆ ಬಂದಿದೆ. ಮುಂಬರುವ ವರ್ಷಗಳಲ್ಲಿ ದೇಶದಲ್ಲಿ ಭ್ರಷ್ಟಾಚಾರ ತೊಲಗಿ, ಅಭಿವೃದ್ಧಿಯಲ್ಲಿ ಪ್ರಕಾಶಿಸುತ್ತದೆ ಎಂದು ಆಶಿಸೋಣ.

ಜೂನ್ ಸಂಚಿಕೆ ನಿಮ್ಮ ಕೈ ಸೇರುವ ವೇಳೆಗೆ ವಿಧಾನ ಪರಿಷತ್‌ಗೆ ಶಿಕ್ಷಕರ ಕ್ಷೇತ್ರದ ಪ್ರತಿನಿಧಿ ಚುನಾವಣೆ ಮುಗಿದಿರುತ್ತದೆ. ಈ ಚುನಾವಣೆಯಲ್ಲೂ ಪ್ರಜ್ಞಾವಂತ ಶಿಕ್ಷಕರು ತಮ್ಮ ಆತ್ಮಸಾಕ್ಷಿಗೆ ಅನುಗುಣವಾಗಿ ಮತ ಚಲಾಯಿಸಿ ಶಿಕ್ಷಣ ಕೇತ್ರಕ್ಕೆ ಅತ್ಯಂತ ಅರ್ಹ ಪ್ರತಿನಿಧಿಯನ್ನು ಆರಿಸುವರೆಂಬ ವಿಶ್ವಾಸ ನಮ್ಮದು. ಈಗ ಆಯ್ಕೆಯಾಗುವ ಶಿಕ್ಷಕ ಪ್ರತಿನಿಧಿಯಿಂದ ಶಿಕ್ಷಕರ, ಶಿಕ್ಷಣದ ಸಮಸ್ಯೆಗಳು ಪರಿಹಾರಗೊಂಡು ಉತ್ತಮ ಶೈಕ್ಷಣಿಕ ವಾತಾವರಣ ರೂಪುಗೊಳ್ಳುತ್ತದೆಂದು ಆಶಿಸೋಣ.

ಜಗದ್ವಂದ್ಯರಾದ ವಾಸರು ಶ್ರೇಷ್ಠಗುರುಗಳು. ಜುಲೈ 12ರಂದು 'ವ್ಯಾಸ ಪೂರ್ಣಿಮ(ಗುರು ಪೂಣಿಮ)'. ಅಂದು ಶಿಕ್ಷಕರಾದ ನಾವು ನಮ್ಮ ಶಾಲೆಗಳಲ್ಲಿ ಗುರು ಪೂರ್ಣಿಮೆಂಯುನ್ನು 'ಗುರುವಂದನಾ ಕಾರ್ಯಕ್ರಮವಾಗಿ' ಆಚರಿಸುವುದಾದರೆ ಅದು ಹೆಚ್ಚು ಅರ್ಥಪೂರ್ಣವಾಗುತ್ತದೆ. ಆದ್ದರಿಂದ ನಾವೆಲ್ಲ ನಮ್ಮ ಶಾಲೆಗಳಲ್ಲಿ ಗುರುಪೂರ್ಣಿಮೆಯನ್ನು ಆಚರಿಸುವ ಸಂಕಲ್ಪವನ್ನು ಮಾಡೋಣ.

"ವೈದ್ಯೋ ನಾರಾಯಣೋ ಹರಿ:". ವೈದ್ಯರು ಒಂದರ್ಥದಲ್ಲಿ ದೇವರ ರೂಪವೇ ಸರಿ. ಅನೇಕ ಜೀವಗಳನ್ನು ಉಳಿಸುವ ಪವಿತ್ರ ಕಾರ್ಯದಲ್ಲಿ ಹಗಲಿರುಳೂ ತಮ್ಮನ್ನು ತೊಡಗಿಸಿಕೊಳ್ಳುವ ವೈದ್ಯರಿಗೆಲ್ಲಾ ರಾಷ್ಟ್ರೀಯ ವೈದ್ಯರ ದಿನದ ಸಂದರ್ಭದಲ್ಲಿ ನಮ್ಮ ನಮನಗಳು ಹಾಗೂ ಶುಭ ಕಾಮನೆಗಳು.

ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಬಾಲಗಂಗಾಧರ ತಿಲಕರ ಹೆಸರು ಅಜರಾಮರ. ತಿಲಕರು ತಮ್ಮದೇ ಅದ ವಿಶಿಷ್ಟ ಧಾಟಿಯಲ್ಲಿ ದೇಶದ ಬಿಡುಗಡೆಗಾಗಿ ಹೋರಾಡಿದವರು. ಬಾಲಗಂಗಾಧರ ತಿಲಕರ ಜಯಂತಿ ಹಾಗೂ ಪುಣ್ಯದಿನಗಳು ಜುಲೈ ತಿಂಗಳಿನಲ್ಲಿ ಬಂದಿರುವುದು ವಿಶೇಷ. ಈ ಸಂದರ್ಭದಲ್ಲಿ ತಿಲಕರಿಗೆ ನಮ್ಮ ನಮನಗಳು.

ಸಂಪಾದಕ

# ವ್ಯಾಸವಾಣಿ




ಊರ್ಧ್ವ ಬಾಹು ವಿರೌಮ್ಯೇಶಾಂ ।
ನಚ ಕಶ್ಚಿತ್ ಶೃಣೋತಿಮೇ ॥
ಧರ್ಮಾದರ್ಥಚ ಕಾಮಶ್ಚ ನ ಕಿಮರ್ಥಂ ನ ಸೇವ್ಯತೆ ॥

## ಪರಿವಿಡಿ


- 'ಗುರುಪೂರ್ಣಿಮೆ' ಎಂಬ ಶಿಕ್ಷಕ ದಿನಾಚರಣೆ 3
- ಓಬವ್ವ 4
- ಹೆಮ್ಮೆಯ ಭಾರತ 5
- ಲೋಕಮಾನ್ಯ ಬಾಲ ಗಂಗಾಧರ ತಿಲಕರ ಜೀವನ ಹಾಗೂ ಸಾಧನೆಗಳು 6
- ವಿದ್ಯಾರ್ಥಿಗಳಿಗೆ ಒಂದು ಕಿವಿ ಮಾತು 7
- ಹೃದಯ ತಪಾಸಣಾ ಶಿಬಿರ 8
- ವ್ಯಕ್ತಿತ್ವದ ಪ್ರಮುಖ ಲಕ್ಷಣಗಳು 9
- ವಿದ್ಯಾರ್ಥಿ ಮಿತ್ರ 10
- ಜೀವನ ಮೌಲ್ಯಗಳು 11
- ಅಭಿನಂದನೆ 12

# 'ಗುರುಪೂರ್ಣಿಮೆ' ಎಂಬ ಶಿಕ್ಷಕ ದಿನಾಚರಣೆ

✍ ಭೀಮಸೇನ ಪುರೋಹಿತ್
ಎಂ.ಟೆಕ್. ವಿದ್ಯಾರ್ಥಿ
ಬೆಂಗಳೂರು



**"ಅಜ್ಞಾನತಿಮಿರಾಂಧಸ್ಯ ಜ್ಞಾನಾಂಜನಶಲಾಕಯಾ
ಚಕ್ಷುರುನ್ಮೀಲಿತಂ ಯೇನ ತಸ್ಮೈ ಶ್ರೀಗುರವೇ ನಮಃ ॥"**

ಯಾವ ಮಹಾತ್ಮನು, ಅಜ್ಞಾನದ ಕತ್ತಲೆಯಿಂದ ಕುರುಡಾದ ವ್ಯಕ್ತಿಗೆ ಜ್ಞಾನವೆಂಬ ಅಂಜನದ ಮೂಲಕ ಕಣ್ಣು ತೆರೆಸಿ ಹೊಸಬೆಳಕನ್ನು ಕರುಣಿಸುವನೋ, ಅಂತಹ ಗುರುಗಳಿಗೆ ನಮಸ್ಕಾರಗಳು.

ಗುರುಗಳ ಬಗೆಗಿನ ಗೌರವವನ್ನು ಸೂಚಿಸುವ ಇಂಥಹ ಹಲವಾರು ಶ್ಲೋಕಗಳು ನಮಗೆ ಎಲ್ಲ ಭಾಷೆಗಳಲ್ಲೂ ದೊರೆಯುತ್ತವೆ. ಅತ್ಯಂತ ಪ್ರಾಚೀನವಾದ ವೇದಗಳೂ "ಆಚಾರ್ಯ ದೇವೋ ಭವ" ಎಂದು ಗುರುಗಳನ್ನು ದೈವಸ್ವರೂಪರೆಂದು ಬಣ್ಣಿಸಿವೆ. ನಮಗೆ ಬದುಕಿನ ಮಾರ್ಗವನ್ನು ತೋರಿಸಿ, ಸಮಾಜದ ಒಬ್ಬ ಪ್ರಜೆಯಾಗಿ ರೂಪಿಸಿದ ಇಂತಹ ಗುರುಗಳ ಋಣವನ್ನು ನಾವು ಜನ್ಮಗಳೆತ್ತಿದರೂ ತೀರಿಸಲು ಸಾಧ್ಯವಿಲ್ಲ. ಉಪನಿಷತ್ತಿನಲ್ಲಿ "ಭೂಯಿಷ್ಠಾಂ ನಮ ಉಕ್ತಿಂ ವಿಧೇಮ" ಎಂದು ಹೇಳುವಂತೆ, ದೈವ ಪ್ರತೀಕವಾಗಿರುವ ಗುರುಗಳಿಗೆ ಭಕ್ತಿಪೂರ್ವಕವಾದ ನಮಸ್ಕಾರವೊಂದನ್ನು ಬಿಟ್ಟು ಬೇರೇನೂ ಅರ್ಪಿಸಲು ಸಾಧ್ಯವಿಲ್ಲ.

ಹೀಗೆ ಗುರುಗಳನ್ನು ಸ್ಮರಿಸಿ, ನಮಿಸುವುದಕ್ಕಾಗಿ ಭಾರತೀಯ ಸಂಸ್ಕೃತಿ ಆಯ್ದುಕೊಂಡ ದಿನವೇ "ಗುರುಪೂರ್ಣಿಮೆ". ಆಷಾಢ ಮಾಸದ ಹುಣ್ಣಿಮೆಯಂದು ಆಚರಿಸಲಾಗುವ ಈ ಗುರುಪೂರ್ಣಿಮೆ ಮೂಲತಃ ಹಿಂದೂ ಮತ್ತು ಬೌದ್ಧ ಎರಡೂ ಧರ್ಮಗಳ ಹಬ್ಬವಾಗಿದೆ. ಅದರ ಕಾರಣಗಳೂ ಅಷ್ಟೇ ವಿಶಿಷ್ಟವಾಗಿವೆ. ಹಿಂದೂಗಳ ಪ್ರಕಾರ ಇದು ಮಹರ್ಷಿ ವೇದವ್ಯಾಸರು ಅವತರಿಸಿದ ದಿನ. ವೇದವ್ಯಾಸರು ಮಹರ್ಷಿ ಪರಾಶರರು ಮತ್ತು ಸತ್ಯವತೀ ದೇವಿಯರ ಮಗನಾಗಿ ಅವತರಿಸಿದರು. ವೈದಿಕ ಸಂಸ್ಕೃತಿಗೆ ವ್ಯಾಸರು ನೀಡಿದ ಕೊಡುಗೆಯಂತೂ ಅಪ್ರತಿಮ, ಅನನ್ಯ. ಇಂದಿಗೂ ಎಲ್ಲ ವೈದಿಕ ಮತಾಚಾರ್ಯರೂ, ಅನುಯಾಯಿಗಳೂ ಅವರನ್ನು ಪ್ರತಿನಿತ್ಯವೂ ಸ್ಮರಿಸಲೇಬೇಕು. ಅಷ್ಟೇ ಅಲ್ಲ, ಕೆಲವು ಪ್ರಾಚೀನ ಗ್ರಂಥಗಳ ಪ್ರಕಾರ, ಶ್ರೀವೇದವ್ಯಾಸರು ಇದೇ ದಿನ ತಾವು ಬರೆದ ಬ್ರಹ್ಮಸೂತ್ರಗಳನ್ನು ಪೂರ್ಣಗೊಳಿಸಿದರು ಎಂಬ ಮಾಹಿತಿ ಇದೆ. ಅಂದರೆ, ಆಷಾಢ ಶುದ್ಧ ಪಾಡ್ಯದಿಂದ ಪ್ರಾರಂಭವಾಗಿ ಆಷಾಢಪೌರ್ಣಿಮೆಯಂದು ಬ್ರಹ್ಮಸೂತ್ರಗಳ ರಚನೆಯನ್ನು ಮುಕ್ತಾಯಗೊಳಿಸಿದರು ಎಂಬುದು ಗ್ರಂಥಗಳ ಉಲ್ಲೇಖ. ಇಡೀ ವೇದಗಳ ಸಾರವನ್ನು ವರ್ಣಿಸುವ ಇಂತಹ ಬ್ರಹ್ಮಸೂತ್ರಗಳು ವ್ಯಾಸರಿಂದ ಜಗತ್ತಿಗೆ ನೀಡಲ್ಪಟ್ಟ ದಿನವಾದ್ದರಿಂದಲೂ ಈ ಹುಣ್ಣಿಮೆಗೆ ವಿಶಿಷ್ಟ ಸ್ಥಾನವಿದೆ.

ಬೌದ್ಧರ ಪ್ರಕಾರ ಈ ದಿನದಂದು ಬುದ್ಧನು ತನ್ನ ಮೊತ್ತ ಮೊದಲ ಉಪದೇಶವನ್ನು ನೀಡಿದನೆಂಬ ನಂಬಿಕೆಯಿದೆ. ಗೌತಮನು ಬೋಧಗಯಾದಲ್ಲಿ ಜ್ಞಾನದ ಬೆಳಕನ್ನು ಪಡೆದು ಬುದ್ಧನಾದ ಮೇಲೆ ಸಾರನಾಥಕ್ಕೆ ತೆರಳಿದನು. ಮಾರ್ಗ ಮಧ್ಯೆ ಬಂದ ಗಂಗೆಯನ್ನು ದಾಟಿ, ತನ್ನ ಐದು ಶಿಷ್ಯರನ್ನು ಕಂಡು, ಅವರಿಗೂ ತಾನು ಪಡೆದ ಜ್ಞಾನದ ಬೋಧನೆ ಮಾಡಿದನು. ಇದು "ಧರ್ಮಚಕ್ರ ಪ್ರವರ್ತನ ಸೂತ್ರ"ವೆಂದೆ ಬೌದ್ಧರ ಗ್ರಂಥಗಳಲ್ಲಿ ಉಲ್ಲೇಖವಿದೆ. ಇಂತಹ ಅದ್ಭುತ ಉಪದೇಶ ಪ್ರಥಮ ಬಾರಿಗೆ ತನ್ನ ಶಿಷ್ಯರಿಗೆ ನೀಡಿ ಅವರನ್ನೂ ಜ್ಞಾನಿಗಳನ್ನಾಗಿ ಮಾಡಿದ ದಿನವೇ ಈ ಗುರುಪೂರ್ಣಿಮೆ. ಈ ಎಲ್ಲ ವಿಶೇಷಗಳಿಂದ ಈ ದಿನವು ಭಾರತೀಯರಲ್ಲಿ ಅತ್ಯಂತ ಮಹತ್ವದ ದಿನವಾಗಿ ರೂಪುಗೊಂಡಿದೆ.

ಗುರುಪೂರ್ಣಿಮೆಯು ಮೂಲತಃ ಆಧ್ಯಾತ್ಮಿಕ ಶಿಕ್ಷಣ ಕ್ರಮದಲ್ಲಿನ ಗುರುಗಳ ದಿನವಾಗಿದ್ದರೂ, ಅದು ಇಡೀ ಭಾರತದ "ಶಿಕ್ಷಕರ ದಿನಾಚರಣೆ"ಯಾಗಲು ಹೆಚ್ಚು ಸೂಕ್ತವೆನಿಸುತ್ತದೆ. ಪ್ರಸ್ತುತ ದೇಶಾದ್ಯಂತ ಡಾ.ಸರ್ವಪಲ್ಲಿ ರಾಧಾಕೃಷ್ಣನ್ ಅವರ ಹುಟ್ಟುಹಬ್ಬದ ದಿನವಾದ ಸೆಪ್ಟೆಂಬರ್ ಐದರಂದು 'ಶಿಕ್ಷಕ

ಪುಟ 4 ಕ್ಕೆ ➤

➢ ಪುಟ 3 ರಿಂದ..... **ಗುರುಪೂರ್ಣಿಮೆ**

ದಿನಾಚರಣೆ'ಯನ್ನು ಆಚರಿಸುತ್ತಿದ್ದೇವೆ. ಆದಾಗ್ಯೂ ಅನೇಕ ಅಂಶಗಳಿಂದ ಗುರುಪೂರ್ಣಿಮೆಯ ಮಹತ್ವವು ಹೆಚ್ಚಿನದ್ದೆಂದು ಸ್ಫುಟವಾಗಿ ಗೋಚರಿಸುತ್ತದೆ. ಮೊದಲನೆಯದಾಗಿ ಇದು ವ್ಯಾಸರ ಜನ್ಮದಿನ. ವ್ಯಾಸರು ಕೇವಲ ಭಾರತಕ್ಕಷ್ಟೇ ಅಲ್ಲದೆ ಇಡೀ ಜಗತ್ತಿಗೆ ಗುರು ಸಮಾನರಾಗಿದ್ದಾರೆ. "ಮಹಾಭಾರತ" ಎಂಬ ಕೃತಿಯ ಮೂಲಕ ಅದರಲ್ಲಿನ ಭಗವದ್ಗೀತೆಯ ಸಂದೇಶಗಳ ಮೂಲಕ ಮಾನವನ ಬದುಕಿನ ಎಲ್ಲ ಆಯಾಮಗಳನ್ನು ವಿವರಿಸಿ ಬದುಕಿನ ಮಾರ್ಗಗಳನ್ನು ತಿಳಿಸಿಕೊಟ್ಟಿದ್ದಾರೆ. ಅದಕ್ಕೆಂದೇ ಮಹಾನ್ ವಿಜ್ಞಾನಿಗಳಾದ ಐನ್‌ಸ್ಟೀನ್, ಹೈಸನ್‌ಬರ್ಗ್ ಮುಂತಾದವರೂ ಗೀತೆಯ ಸಾರ್ವಕಾಲಿಕ ಶ್ರೇಷ್ಠತೆಯನ್ನು ಪ್ರತಿಪಾದಿಸಿದ್ದಾರೆ. ಇಷ್ಟೇ ಅಲ್ಲ, ತಾವು ರಚಿಸಿದ ಅಷ್ಟಾದಶ ಪುರಾಣಗಳಲ್ಲಿ ಅನೇಕ ಘಟನೆಗಳು, ಕಥೆಗಳ ಮೂಲಕ ಜೀವನದ ಮೌಲ್ಯಗಳನ್ನು ತಿಳಿಸಿದ್ದಾರೆ. ಭಾರತೀಯ ಬುನಾದಿಯಾದ ವೇದಗಳನ್ನು ವಿಂಗಡಿಸಿ ಅಭ್ಯಾಸಕ್ಕೆ ಅನುಕೂಲವಾಗುವಂತೆ ಮಾಡಿರುವುದೂ ಈ ವ್ಯಾಸರೇ. ಜೈಮಿನಿ, ಪೈಲ, ಮೊದಲಾದ ಶಿಷ್ಯರನ್ನು ಬೆಳೆಸಿ ಗುರು–ಶಿಷ್ಯ ಪರಂಪರೆಯನ್ನು ವ್ಯಾಪಕಗೊಳಿಸಿದ್ದೂ ವ್ಯಾಸರೇ. ಹೀಗೆ ಎಲ್ಲ ಭಾರತೀಯರಿಗೂ ಸರ್ವದಾ ಅತ್ಯಂತ ಶ್ರೇಷ್ಠ ಗುರುಗಳಾಗಿರುವ ವ್ಯಾಸರು ಅವತರಿಸಿದ ದಿನದಂದು "ಶಿಕ್ಷಕದಿನಾಚರಣೆ"ಯನ್ನು ಆಚರಿಸುವುದು ಕೂಡುತ್ತದೆ. ಅಲ್ಲದೆ, ಬುದ್ಧನು ಉಪದೇಶ ನೀಡಿ ಶಿಷ್ಯರನ್ನು ಜ್ಞಾನಿಗಳನ್ನಾಗಿಸಿದ್ದರಿಂದ, ಬೋಧನೆಯ ಸಂಕೇತವಾಗಿಯೂ ಈ ದಿನ "ಶಿಕ್ಷಕ ದಿನಾಚರಣೆ"ಗೆ ಹೆಚ್ಚು ಸೂಕ್ತವಾಗಿದೆ. ಮತ್ತು ಈ ಗುರುಪೂರ್ಣಿಮೆಯು ಸಾಮಾನ್ಯವಾಗಿ ಜೂನ್–ಜುಲೈ ತಿಂಗಳಲ್ಲೇ ಬರುತ್ತದೆ. ಶಾಲಾ–ಕಾಲೇಜುಗಳ ಶೈಕ್ಷಣಿಕ ವರ್ಷ ಆರಂಭವಾಗುವುದೂ ಬಹುತೇಕ ಇದೇ ಸಮಯದಲ್ಲೇ. ಹೀಗಾಗಿ ರಜೆ ಮುಗಿಸಿ ಬಂದ ಮಕ್ಕಳಿಗೆ ಪ್ರಾರಂಭದಲ್ಲಿಯೇ ಗುರುಗಳ ಮಹತ್ವವನ್ನು ತಿಳಿಸುವ ಇಂಥ ದಿನಾಚರಣೆಯನ್ನು ಆಚರಿಸುವುದು ಸರ್ವಥಾ ಉಚಿತವೆನಿಸುತ್ತದೆ.

ಪಾಶ್ಚಾತ್ಯ ಶಿಕ್ಷಣ ಕ್ರಮದ ಆಗಮನವಾದಾಗಿನಿಂದ, ನಮ್ಮ ಭಾರತೀಯ ಮೂಲ ಶಿಕ್ಷಣ ವ್ಯವಸ್ಥೆಯೇ ಕವಲೊಡೆದಿದೆ. ಲೌಕಿಕ ಶಿಕ್ಷಣವೇ ಬೇರೆ, ಆಧ್ಯಾತ್ಮಿಕ ಶಿಕ್ಷಣವೇ ಬೇರೆಯಾಗಿ ತಮ್ಮದೇ ಪಥದಲ್ಲಿ ಸಾಗುತ್ತಿವೆ. ವಸ್ತುತ ಬದುಕಿನ ಜೊತೆಗೆ ಆಧ್ಯಾತ್ಮವೂ ಬೆರೆಯಬೇಕಿದ್ದರೂ, ಹೀಗೆ ವಿಭಿನ್ನವಾಗಿರುವುದು ಶಿಕ್ಷಣಕ್ಕೆ ಆದ ದೊಡ್ಡಪೆಟ್ಟು. ಆದಾಗ್ಯೂ ವಿವೇಕಾನಂದ ರಂತಹವರು ಎರಡೂ ರೀತಿಯ ಶಿಕ್ಷಣಗಳಲ್ಲಿ ಸಮನ್ವಯ ತರಲು ಶ್ರಮಿಸಿದ್ದು ಪ್ರಶಂಸಾರ್ಹವೇ.

ಹೀಗಾಗಿ ಇಂದು ಮತ್ತೆ ಭಾರತೀಯತೆಯ ಪುನರುಜ್ಜೀವನದ ಕಾಲಘಟ್ಟದಲ್ಲಿ, ಮೌಲ್ಯಯುತ ಶಿಕ್ಷಣವನ್ನು ಕೇಂದ್ರೀಕರಿಸ ಬೇಕಾಗಿದೆ. ಕೇವಲ ಅಂಕ ಪಟ್ಟಿ, ನೌಕರಿಯ ಗುರಿಯನ್ನು ಹೊಂದಿರುವ ಶಿಕ್ಷಣಕ್ಕಿಂತ, ಮಾನವನ ಮೌಲ್ಯವರ್ಧನೆಯನ್ನು, ಮನೋವಿಕಾಸವನ್ನು ಗುರಿಯಾಗಿಸಿಕೊಂಡ ಶಿಕ್ಷಣವು ಅತ್ಯವಶ್ಯವಾಗಿದೆ. ಈ ದಿಶೆಯಲ್ಲಿ ವ್ಯಾಸರ ಜನ್ಮದಿನದಂದು, ಬುದ್ಧನು ಉಪದೇಶ ನೀಡಿದ ದಿನದಂದು, ಈ ಮಹಾತ್ಮರ ಶ್ರೇಷ್ಠತೆಯನ್ನು ವಿದ್ಯಾರ್ಥಿಗಳಿಗೆ ತಿಳಿಸಿ, ತನ್ಮೂಲಕ ಉತ್ತಮ ಸಮಾಜ–ರಾಷ್ಟ್ರವನ್ನು ನಿರ್ಮಿಸುವ ಕಾರ್ಯ ನಡೆಯಬೇಕಿದೆ.

ನಮ್ಮ ಯಶಸ್ಸಿನ ಕಾರಣಕರ್ತೃಗಳಾದ ಗುರುಗಳ ಸ್ಮರಣೆ ನಮ್ಮ ಮನಸ್ಸಿನಲ್ಲಿ ನಿರಂತರವಾಗಿರಲಿ. ನಮ್ಮ ಗುರುಗಳು ನಮ್ಮನ್ನು ಸದಾ ಹರಸಲಿ.

ವಂದೇಮಾತರಂ. ●

# ಓಬವ್ವ



**ಓಬವ್ವ ಒಬ್ಬ ಮಹಿಳೆ**
**ಪಿಸುಮಾತನು ಆಲಿಸಿದ ದಿಟ್ಟ ಮಹಿಳೆ**
**ಒನಕೆಯನ್ನು ಹಿಡಿದು ನಿಂತ ಧೀರ ಮಹಿಳೆ**
**ಗಂಡನಿಂದ ಊದಿಸಿದಳು ಕಹಳೆ**
**ಹೋರಾಡಿದಳು ಶತ್ರುಗಳ ವಿರುದ್ಧ**
**ಮಾಡಿದಳು ಸೈನಿಕರ ನಡುವೆ ಯುದ್ಧ**
**ತೋರಿಸಿದಳು ಶತ್ರುಗಳಿಗೆ ರಣಚಂಡಿಯ ರೂಪ ಶತ್ರುಗಳಿಗೆ**
**ಅಂದೇ ಕೊನೆಯ ದಿವಸ ಪಾಪ**
**ಪ್ರಜೆಗಳು ಹೊಗಳುವಂತೆ ಮಾಡಿದಳು ಸಾಹಸ**
**ಆಯಿತು ಅಂದೇ ಅವಳ ಕೊನೆಯ ದಿವಸ**
**ನಾಯಕರಿಗೆ ಅನಿಸಿತು ಅಂದು ಪ್ರಸಿದ್ಧ ದಿವಸ**

✍ **ಎನ್. ನಳಿನ ಮಂಜುನಾಥ್,**
ಅಲೈನ್ ಪಬ್ಲಿಕ್ ಶಾಲೆ, ಕನಕಪುರ ರಸ್ತೆ, ಬೆಂಗಳೂರು

# ಹೆಮ್ಮೆಯ ಭಾರತ

## (ಜರ್ಮನಿಯ ಪತ್ರಿಕೆಯೊಂದು ಪ್ರಕಟಿಸಿರುವಂತೆ)

ಪ್ರೊ|| ಕೃ. ನರಹರಿ
ಮಹಾಪೋಷಕರು
ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘ



1. ಭಾರತ ಯಾವ ದೇಶದ ಮೇಲೂ ಆಕ್ರಮಣ ನಡೆಸಿಲ್ಲ.
2. ಪ್ರಪಂಚದ ಮೊದಲ ವಿಶ್ವವಿದ್ಯಾನಿಲಯ ಸ್ಥಾಪನೆಯಾದುದು ಕ್ರಿ.ಪೂ 700 ರಲ್ಲಿ ತಕ್ಷಶಿಲೆಯಲ್ಲಿ. ಜಗತ್ತಿನ ಎಲ್ಲಾ ಭಾಗಗಳಿಂದ 10500ಕ್ಕೂ ಹೆಚ್ಚು ವಿದ್ಯಾರ್ಥಿಗಳು 60 ಕ್ಕಿಂತ ಹೆಚ್ಚಿನ ವಿಷಯಗಳಲ್ಲಿ ವ್ಯಾಸಂಗ ಮಾಡುತ್ತಿದ್ದರು. ಕ್ರಿ.ಪೂ4ನೇ ಶತಮಾನದಲ್ಲಿ ಸ್ಥಾಪಿತವಾದ ನಳಂದ ವಿಶ್ವವಿದ್ಯಾನಿಲಯವು ಪ್ರಾಚೀನ ಭಾರತದ ಅತ್ಯುತ್ತಮ ಸಾಧನೆಗಳಲ್ಲಿ ಒಂದು.
3. ಆರ್ಯುವೇದವು ಮಾನವರಿಗೆ ತಿಳಿದಿದ್ದ ಮೊದಲ ವೈದ್ಯಕೀಯ ಶಾಲೆ.
4. ಹಿಂದೂಗಳು (ಭಾರತೀಯರು) ಸೊನ್ನೆ, ಮೌಲ್ಯ ಪದ್ದತಿಯ ಮಹತ್ವ ಮತ್ತು ದಶಮಾಂಶ ಪದ್ದತಿಯನ್ನು ಕಂಡು ಹಿಡಿದರು.
5. ಪ್ರಾಚೀನ ಕಾಲದಲ್ಲಿ ಗ್ರೀಕರು ಮತ್ತು ರೋಮನರು ಬಳಸುತ್ತಿದ್ದ ದೊಡ್ಡ ಸಂಖ್ಯೆಗಳು 106 ವರೆಗಾದರೆ, ಹಿಂದೂಗಳು 1053 ಕ್ಕಿಂತ ಹೆಚ್ಚಿನ ಸಂಖ್ಯೆಗಳನ್ನು ಬಳಸುತ್ತಿದ್ದರು.
6. ಬೀಜಗಣಿತ, ಟ್ರಿಗ್ನಾಮಿಟ್ರಿ, ಕ್ಯಾಲ್ಕುಲಸ್‌ಗಳ ಅಧ್ಯಯನವು ಭಾರತದಿಂದ ಪ್ರಾರಂಭವಾಗಿದೆ. ಕ್ವಾಡ್ರಾಟಿಕ ಸಮೀಕರಣವನ್ನು ಶ್ರೀಯುತ ಶ್ರೀಧರಾಚಾರ್ಯರು 11ನೇ ಶತಮಾನದಲ್ಲಿ ಬಿಡಿಸಿದರು.
7. ಪೈ ಮೌಲ್ಯವನ್ನು ಬೋಧಾಯನರು 6ನೇ ಶತಮಾನದಲ್ಲಿ ಮೊದಲ ಬಾರಿಗೆ ಕಂಡುಹಿಡಿದರು. ಪೈಥಾಗೊರಸ್ ಪ್ರಮೇಯವನ್ನು ಪ್ರತಿಪಾದಿಸಿದವರೂ ಬೋಧಾಯನರೇ.
8. 5000 ವರ್ಷಗಳ ಹಿಂದೆ ಪ್ರಪಂಚದ ಬಹಳಷ್ಟು ಸಂಸ್ಕೃತಿಯವರು ಅರಣ್ಯವಾಸಿ ಅಲೆಮಾರಿಗಳಾಗಿದ್ದಾಗ ಭಾರತೀಯರು ಹರಪ್ಪ ಸಂಸ್ಕೃತಿಯನ್ನು ಸಿಂಧೂ ಕಣಿವೆಯಲ್ಲಿ ಸ್ಥಾಪಿಸಿದರು.
9. ನೌಕಾಯಾನ ಶಾಸ್ತ್ರವು ಸಿಂಧೂ ನದಿಯ ಕಣಿವೆಯಲ್ಲಿ 5000 ವರ್ಷಗಳ ಹಿಂದೆ ಹುಟ್ಟಿತು. 'ನೌಕಾಯಾನ' ಎಂಬ ಪದ ಜನಿಸಿದ್ದೇ ಸಂಸ್ಕೃತದ 'ನವಗತಿಃ' ಶಬ್ದದಿಂದ.
10. ಪ್ರಾಚೀನ ಭಾರತೀಯರು ಚದುರಂಗದಾಟ(ಚೆಸ್) ವನ್ನು ಕಂಡು ಹಿಡಿದರು.
11. ಶಸ್ತ್ರಕ್ರಿಯೆಯ ಜನಕ ಸುಶ್ರುತ. ಇವರು ಮತ್ತು ಸಹ ಆರೋಗ್ಯ ವಿಜ್ಞಾನಿಗಳು (ವೈದ್ಯರು) ಕೃತಕ ಕಾಲು ಜೋಡಣೆ, ಪ್ಲಾಸ್ಟಿಕ್ ಶಸ್ತ್ರಕ್ರಿಯೆ ಹಾಗೂ ಮಿದುಳು ಶಸ್ತ್ರ ಚಿಕಿತ್ಸೆಗಳನ್ನು ನೆರವೇರಿಸಿದರು. ಪ್ರಾಚೀನ ಭಾರತದಲ್ಲಿ ಅರವಳಿಕೆಯ ಬಳಕೆ ಚೆನ್ನಾಗಿ ತಿಳಿದಿತ್ತು. 125ಕ್ಕೂ ಹೆಚ್ಚು ಶಸ್ತ್ರ ಚಿಕಿತ್ಸೆಯ ಉಪಕರಣಗಳನ್ನು ಬಳಸಲಾಗುತ್ತಿತ್ತು. ಭಾರತೀಯ ಶಾಸ್ತ್ರಗ್ರಂಥಗಳಲ್ಲಿ ಅಂಗ ರಚನಾಶಾಸ್ತ್ರ, ಭ್ರೂಣಶಾಸ್ತ್ರ, ಶರೀರ ವಿಜ್ಞಾನ ಮುಂತಾದ ಶಾಸ್ತ್ರಗಳ ಆಳವಾದ ವಿಚಾರಗಳನ್ನು ಪ್ರಸ್ತಾಪಿಸಲಾಗಿದೆ.
12. ರೇಡಿಯೋದ ಆದ್ಯಪ್ರವರ್ತಕ ಮಾರ್ಕೋನಿಯಲ್ಲ, ಪ್ರೊ|| ಜಗದೀಶ್ ಚಂದ್ರಬೋಸರು ಎಂಬವಿಚಾರವನ್ನು ಅಮೆರಿಕ ಮೂಲದ ಐ.ಇ.ಇ.ಇ ಸಂಸ್ಥೆ ಸಾಧಿಸಿ ತೋರಿಸಿದೆ.
13. ಮೈಕ್ರೋ ಸಾಸ್ಟ್ ಉದ್ಯೋಗಿಗಳಲ್ಲಿ 34% ಭಾರತೀಯರು.
14. ಇಂಟೆಲ್‌ನ ಉದ್ಯೋಗಿಗಳಲ್ಲಿ 17% ಭಾರತೀಯರು
15. ಭಾರತೀಯರಾದ ಶ್ರೀ ವಿನೋದ್ ಧಾಮ್ ಪಂಟಿಯಮ್ ಚಿಪ್‌ಅನ್ನು ಕಂಡುಹಿಡಿದರು.
16. ಶ್ರೀ ವಿನೋದ್ ಖೋಸ್ಲಾರವರು ಸನ್ ಮೈಕ್ರೋ ಸಿಸ್ಟಮ್‌ನ ಸಹ ಸಂಶೋಧಕರು.
17. ಪೆಪ್ಸಿ ಕಂಪನಿಯ ಮೊದಲ ಮಹಿಳಾ ಅಧ್ಯಕ್ಷೆ ಶ್ರೀಮತಿ ಇಂದಿರಾ ನೂಯಿ
18. ಮೈಕ್ರೋ ಸಾಫ್ಟ್ ಕಂಪನಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ (ಸಿ.ಇ.ಓ) ಶ್ರೀ ಸತ್ಯ ನಡೇಲ.
19. ನೊಕಿಯ ಕಂಪನಿಯ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ಶ್ರೀ ರಾಜೀವ್ ಸೂರಿ.
20. ಡಾಯಿಶ್ ಬ್ಯಾಂಕಿನ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಶ್ರೀ ಅಜಿತ್ ಜೈನ್.

(ಸಂಗ್ರಹ)

# ಲೋಕಮಾನ್ಯ ಬಾಲ ಗಂಗಾಧರ ತಿಲಕರ
# ಜೀವನ ಹಾಗೂ ಸಾಧನೆಗಳು



ವಿ. ರಾಜ
ಕರ್ನಾಟಕ ರಾಜ್ಯ
ಮಾಧ್ಯಮಿಕ ಶಿಕ್ಷಕ ಸಂಘ
ಬೆಂಗಳೂರು ದಕ್ಷಿಣ ಜಿಲ್ಲೆ ಅಧ್ಯಕ್ಷರು

'ಸ್ವರಾಜ್ಯ ನಮ್ಮ ಸಿದ್ಧ ಹಕ್ಕು, ಅದನ್ನು ನಾನು ಪಡೆದೇ ತೀರುತ್ತೇನೆ' ಎಂಬ ಘರ್ಜನೆಯಿಂದ ಜನಪ್ರಿಯವಾಗಿದ್ದವರು ಲೋಕಮಾನ್ಯ ಬಾಲ ಗಂಗಾಧರ ತಿಲಕ ಅವರು. ಅವರ ಸಾಧನೆ, ಸೇವೆಗಳು ಇಂದಿಗೂ ಜನ ಸಾಮಾನ್ಯರ ನೆನಪಿನಲ್ಲಿ ಹಸುರಾಗಿದೆ. 'ಲೋಕಮಾನ್ಯ' ಎಂಬ ಹೆಸರಿನಿಂದ ಕರೆಯಲ್ಪಡುತ್ತಿದ್ದ ಬಾಲ ಗಂಗಾಧರ ತಿಲಕರು ಭಾರತೀಯ ರಾಷ್ಟ್ರೀಯವಾದಿ, ಸಮಾಜ ಸುಧಾರಕ ಹಾಗೂ ಸ್ವಾತಂತ್ರ್ಯ ಹೋರಾಟಗಾರರಾಗಿ ಜನಪ್ರಿಯ ನಾಯಕ ಎನಿಸಿದರು. ಭಾರತೀಯರ ಪ್ರಜ್ಞೆಯಲ್ಲಿ ಸಂಪೂರ್ಣ ಸ್ವರಾಜ್ಯದ ಕಿಚ್ಚು ಹಚ್ಚಿದ ತಿಲಕರು ರಾಷ್ಟ್ರೀಯತಾವಾದದ ಪಿತಾಮಹ ಎಂದೂ ಹೆಸರಾಗಿದ್ದಾರೆ. ತಿಲಕರು ಭಾರತದ ಇತಿಹಾಸ, ಸಂಸ್ಕೃತ, ಹಿಂದೂ ಧರ್ಮ, ಗಣಿತ ಹಾಗೂ ಖಗೋಳ ಶಾಸ್ತ್ರಗಳ ಆಳವಾದ ಅಭ್ಯಾಸ ಮಾಡಿದ್ದರು.

1856 ಜುಲೈ 23 ರಂದು ಮಹಾರಾಷ್ಟ್ರದ ರತ್ನಗಿರಿಯ ಮಧ್ಯಮ ವರ್ಗದ ಕುಟುಂಬವೊಂದರಲ್ಲಿ ತಿಲಕರು ಜನಿಸಿದರು. ಚತುರ ವಿದ್ಯಾರ್ಥಿಯಾಗಿದ್ದ ತಿಲಕರಿಗೆ ಗಣಿತದಲ್ಲಿ ವಿಶೇಷ ಪ್ರತಿಭೆಯಿತ್ತು. ಆಧುನಿಕ, ಕಾಲೇಜು ಶಿಕ್ಷಣ ಪಡೆದುಕೊಂಡ ನವಪೀಳಿಗೆಯ ಯುವಕರಲ್ಲಿ ತಿಲಕರೂ ಒಬ್ಬರಾಗಿದ್ದರು. ಪದವಿ ಪಡೆದ ಬಳಿಕ ಪುಣೆಯ ಖಾಸಗಿ ಶಾಲೆಯೊಂದರಲ್ಲಿ ಗಣಿತ ಶಿಕ್ಷಕರಾಗಿ ಸೇರಿದ ತಿಲಕರು, ಅನಂತರ ಅದನ್ನು ಬಿಟ್ಟು ಪತ್ರಕರ್ತರಾದರು. ಪಾಶ್ಚಿಮಾತ್ಯ ಶಿಕ್ಷಣ ಪದ್ಧತಿಯು ಭಾರತೀಯ ಪರಂಪರೆಯನ್ನು ಅವಹೇಳಿಸುವಂಥಾದ್ದೂ ಹಾಗೂ ಭಾರತದ ವಿದ್ಯಾರ್ಥಿಗಳನ್ನು ಕೀಳುಗಳೆಯುವಂಥಾದ್ದು ಎಂಬ ನಿರ್ಧಾರಕ್ಕೆ ಬಂದ ಅವರು, ಈ ಪದ್ಧತಿಯ ತೀವ್ರ ಟೀಕಾಕಾರರಾದರು. ವಿದ್ಯಾರ್ಥಿಗಳಿಗೆ ಒಳ್ಳೆಯ ಗುಣಮಟ್ಟದ ಶಿಕ್ಷಣ ದೊರೆಯಬೇಕು ಎಂಬ ಉದ್ದೇಶದಿಂದ ಪುಣೆಯಲ್ಲಿ ಡೆಕ್ಕನ್ ಎಜುಕೇಷನ್ ಸೊಸೈಟಿಯನ್ನು ಸ್ಥಾಪಿಸಿದರು.

ತಿಲಕರ ರಾಜಕೀಯ ಹೋರಾಟ ಅವಿಸ್ಮರಣೀಯ ವಾದುದು. ತಿಲಕರು ಸ್ಥಾಪಿಸಿದ 'ಕೇಸರಿ' ಮರಾಠಿ ಪತ್ರಿಕೆಯು ಬಹುಬೇಗ ಜನಸಾಮಾನ್ಯರ ಮನೆಮಾತಾಯಿತು. ಅಭಿಪ್ರಾಯ ಸ್ವಾತಂತ್ರ್ಯವನ್ನು, ಅದರಲ್ಲೂ ಮುಖ್ಯವಾಗಿ, 1905 ರ ಬಂಗಾಳದ ವಿಭಜನೆಯ ವಿರೋಧವನ್ನು ಹತ್ತಿಕ್ಕಿದ; ಭಾರತದ ನಾಗರೀಕರನ್ನು, ಸಂಸ್ಕೃತಿಯನ್ನು, ಪರಂಪರೆಯನ್ನು ಹೀಯಾಳಿಸುವ ಬ್ರಿಟಿಷ್ ಸತ್ತೆಯ ತೀವ್ರ ಟೀಕೆಯನ್ನು ಅವರು ಕೇಸರಿಯಲ್ಲಿ ಮಾಡುತ್ತಿದ್ದರು. ಭಾರತೀಯರಿಗೆ ಸ್ವರಾಜ್ಯದ ಹಕ್ಕನ್ನು ಬಿಟ್ಟುಕೊಡಬೇಕೆಂದು ಅವರು ಪ್ರತಿಪಾದಿಸಿದರು. 1890 ರ ದಶಕದಲ್ಲಿ ತಿಲಕರು ರಾಷ್ಟ್ರೀಯ ಕಾಂಗ್ರೆಸ್ ಸೇರಿದರಾದರೂ, ಬಹುಬೇಗ ಸ್ವಾತಂತ್ರ್ಯ ಹೋರಾಟದಲ್ಲಿ ಅದರ ಉದಾರೀ–ಸೌಮ್ಯವಾದೀ ಧೋರಣೆಯ ವಿರೋಧಕರಾದರು. ಗೋಪಾಲಕೃಷ್ಣಗೋಖಲೆಯವರ ಸೌಮ್ಯವಾದೀ ನೀತಿಯ ಕಟುಟೀಕಾಕಾರರಾದರು. ಇದರಲ್ಲಿ ತಿಲಕರಿಗೆ ಬಂಗಾಳದ ಬಿಪಿನ ಚಂದ್ರ ಪಾಲ್ ಹಾಗೂ ಪಂಜಾಬಿನ ಲಾಲಾಲಜಪತ ರಾಯರ ಬೆಂಬಲವಿತ್ತು. 1907ರಲ್ಲಿ ಸೂರತ್ ಅಧಿವೇಶನದಲ್ಲಿ ಕಾಂಗ್ರೆಸ್ ತಿಲಕ್, ಪಾಲ್ ಹಾಗೂ ರಾಯ್ ನೇತೃತ್ವದಲ್ಲಿ 'ಗರಂ ದಳ' ಹಾಗೂ ಗೋಖಲೆಯವರ ನೇತೃತ್ವದಲ್ಲಿ 'ನರಂ ದಳ' ಎಂದು ಇಬ್ಭಾಗವಾಯಿತು. ರಾಜದ್ರೋಹದ ಆರೋಪದ ಮೇಲೆ 1906ರಲ್ಲಿ ಬಂಧನಕ್ಕೊಳಗಾದ ತಿಲಕರು ತಮ್ಮ ಪರವಾಗಿ ವಕಾಲತ್ತು ವಹಿಸುವಂತೆ ಕೇಳಿಕೊಂಡದ್ದು ಯುವ ವಕೀಲ ಮುಹಮದ್ ಆಲಿ ಜಿನ್ನಾರನ್ನು. ಆದರೂ ಬ್ರಿಟಿಷ್ ನ್ಯಾಯಾಧೀಶರಿಂದ ಅಪರಾಧಿ ಎಂದು ಘೋಷಿಸಲ್ಪಟ್ಟು 1908 ರಿಂದ 1914ರ ವರೆಗೆ ಬರ್ಮಾ ದೇಶದ ಮಂಡಾಲೆಯಲ್ಲಿ ಸೆರೆವಾಸ ಅನುಭವಿಸಿದರು. ಬಿಡುಗಡೆಯಾದ ನಂತರ ತಮ್ಮ ಸಹ–ರಾಷ್ಟ್ರೀಯವಾದಿಗಳನ್ನು ಕೂಡಿಕೊಂಡ ತಿಲಕರು 1916ರಲ್ಲಿ ಕಾಂಗ್ರೆಸ್ಸನ್ನು ಕೂಡಾ ಪುನಹ ಒಟ್ಟುಗೂಡಿಸಿದರು. ಅಖಿಲ ಭಾರತ ಹೋಂ ರೂಲ್ ಲೀಗನ್ನು ಸ್ಥಾಪಿಸುವಲ್ಲಿ ಅನಿಬೆಸೆಂಟ್ ಮತ್ತು ಮಹಮದ್ ಆಲಿ ಜಿನ್ನಾರಿಗೆ ಸಹಕಾರ ನೀಡಿದರು.

ತಿಲಕರು ನಾಡಿಗೆ ನೀಡಿರುವ ತಾತ್ವಿಕ ಹಾಗೂ ಸಾಮಾಜಿಕ ಕೊಡುಗೆಗಳು ಅನನ್ಯವಾಗಿವೆ. ಮೂಲತಃ ಅದ್ವೈತ ವೇದಾಂತದ ಪ್ರತಿಪಾದಕರಾಗಿದ್ದರೂ, ಸಾಂಪ್ರದಾಯಿಕ ಅದ್ವೈತ ವೇದಾಂತದ ಪ್ರತಿಪಾದಕರಾಗಿದ್ದರೂ, ಸಾಂಪ್ರದಾಯಿಕ ಅದ್ವೈತದ 'ಜ್ಞಾನವೊಂದರಿಂದಲೇ ಮುಕ್ತಿ' ಎಂಬ ನಂಬುಗೆಯು ಅವರಿಗೆ ಒಪ್ಪಿಗೆಯಿರಲಿಲ್ಲ. ಅದಕ್ಕೆ ಸರಿಸಮನಾಗಿ ಹಾಗೂ ಪೂರಕವಾಗಿ ಅವರು ಕರ್ಮಯೋಗವನ್ನೂ ಸೇರಿಸಿದರು. ವಿವಾಹಕ್ಕೆ ಕನಿಷ್ಠ ವಯೋಮಿತಿಯೇ ಮೊದಲಾಗಿ ತಿಲಕರು ಅನೇಕ ಸಾಮಾಜಿಕ

ಪುಟ 9 ಕ್ಕೆ ➤

# ವಿದ್ಯಾರ್ಥಿಗಳಿಗೆ ಒಂದು ಕಿವಿ ಮಾತು

ಶ್ರೀಮತಿ ಬಿ.ಕೆ. ವರಲಕ್ಷ್ಮಿ
ಪ್ರಾಂತೀಯ ಉಪಾಧ್ಯಕ್ಷರು.
ಕ.ರಾ. ಮಾ.ಶಿಕ್ಷಕಸಂಘ, ಬೆಂಗಳೂರು



ಇಂದಿಗೂ ನಾನೂ ಸಹ ವಿದ್ಯಾರ್ಥಿಯೇ. ಆದರೆ ನಾನು ಯೌವನವನ್ನು ದಾಟಿ ನಿಂತಿರುವೆ. ಯೌವ್ವನದಲ್ಲಿ ಕಲಿತುದನ್ನು ನಾವು ವಯಸ್ಸಾದ ಮೇಲೆ ಪ್ರತಿಯೊಬ್ಬರೂ ಜೀವನದಲ್ಲಿ ತಮ್ಮ ಗುರಿ ಸಾಧನೆಗಾಗಿ ಶ್ರಮಿಸಬೇಕು. 'ಶಕ್ತಿಯೆಲ್ಲಾ ನಿಮ್ಮೊಳಗೇ ಇದೆ. ನೀವು ಏನು ಬೇಕಾದರೂ ಮಾಡಬಲ್ಲಿರಿ. ಎಲ್ಲವನ್ನೂ ಮಾಡಬಲ್ಲಿರಿ'. ಎಂದು ಸ್ವಾಮಿ ವಿವೇಕಾನಂದರು ಹೇಳುವ ಹಾಗೇ, ನಮ್ಮಲ್ಲಿರುವ ಶಕ್ತಿಯಲ್ಲಿ ವಿಶ್ವಾಸ ಬೆಳೆಸಿಕೊಳ್ಳಬೇಕು. ತಮ್ಮ ಅಂತಃ ಶಕ್ತಿಯನ್ನು ಜಾಗೃತಗೊಳಿಸಿಕೊಳ್ಳಬೇಕು. ಇದಕ್ಕಾಗಿ ಸರ್ವವಿಧದಿಂದ ಪ್ರಯತ್ನಿಸಬೇಕು.

'ಬಾಲ್ಯವೇ ಸ್ವಾಗತ ಭಾಷಣ ಯೌವನವೇ ಉಪನ್ಯಾಸ, ಮುಪ್ಪೇ ವಂದನಾರ್ಪಣೆ'. ಬಾಲ್ಯದಲ್ಲಿ ನಮ್ಮ ಪೋಷಕರು ಗುರು–ಹಿರಿಯರು ಪರಿಸರಕ್ಕೆ ಅನುಗುಣವಾಗಿ ಭದ್ರಬುನಾದಿಯನ್ನು ಹಾಕಿರುತ್ತಾರೆ. ಕಷ್ಟದಲ್ಲಿರುವವರಿಗೆ ಸಹಾಯವಾಗಬೇಕು. ಗುರುಹಿರಿಯರಿಗೆ ಗೌರವ ಕೊಡಬೇಕು. ಹಸಿದವರನ್ನು ಸಂತೈಸಿ–ರೋಗಿಗಳನ್ನು ಉಪಚರಿಸಬೇಕು. ಸತ್ಯವನ್ನು ನುಡಿಯಬೇಕು. ಆದರೆ ಬೇರೆಯವರಿಗೆ ನೋವಾಗುವ ಹಾಗೆ ನುಡಿಯಬಾರದು. ಶತ್ರುಗಳನ್ನೂ ಮಿತ್ರರಾಗಿ ಕಾಣಬೇಕು. ಹೀಗೆ ಹಲವಾರು ಹಿತನುಡಿಗಳೊಂದಿಗೆ ಬೆಳೆಸುತ್ತಾರೆ. ನಮ್ಮ ಗುರಿಯನ್ನು ನಿರ್ಧರಿಸುವಾಗ ನಮ್ಮ ಒಲವಿಗೆ ತಕ್ಕ ಕ್ಷೇತ್ರ ಆರಿಸಿಕೊಳ್ಳಬೇಕು. ನಮ್ಮಲ್ಲಿ ಅಪಾರವಾದ ಸಕಾರಾತ್ಮಕ ವಿಚಾರ ಸಂಪತ್ತಿದೆ. ಯಾವ ಕಾರಣಕ್ಕೂ ನಕಾರಾತ್ಮಕ ವಿಚಾರಗಳಿಗೆ ಪ್ರಭಾವ ಬೀರದೆ ಕೆಲಸ ಸಾಧಿಸಬೇಕು. 'ಯೌವನವು ಖಾಲೀ ಕಾಗದದಂತೆ ಅದರ ಮೇಲೆ ನಾವು ಏನು ಬೇಕಾದರೂ ಬರೆಯಬಹುದು' ಎಂದು ಶ್ರೀಯುತ ಬೀಚಿಯವರು ಹೇಳುತ್ತಾರೆ. ಹಾಗೇ ನಾವು ಯೌವನವನ್ನು ಶುದ್ಧ ಚಾರಿತ್ರ್ಯವನ್ನು ಬರೆಯಬೇಕು. ದೈಹಿಕ, ಮಾನಸಿಕ ಮತ್ತು ಬೌದ್ಧಿಕ ಶಕ್ತಿ ಬೆಳಸಬೇಕು. ಯೌವನವೆಂಬುದು ಒಂದು ಶಕ್ತಿ ಸಾಗರ. ಶ್ರದ್ಧಾವಂತರಾಗಿ ಶಕ್ತಿ ಸಾಮರ್ಥ್ಯದ ದೃಢತೆಯನ್ನು ಬೆಳೆಸಿಕೊಳ್ಳಬೇಕು. ಉದಾ: ಶ್ರೀಮಾನ್ ಹನುಮಂತನನ್ನು ತೆಗೆದುಕೊಳ್ಳೋಣ ಅವನು ಆ ದೊಡ್ಡ ಸಾಗರವನ್ನು ಹೇಗೆ ದಾಟಿದ. ಶಕ್ತಿ ಸಾಮರ್ಥ್ಯ ಬೆಳೆಸಿದ ಮೇಲೆ ನಮ್ಮ ಗುರಿ ಸಾಧನೆಗೆ ಸೂಕ್ತಮಾರ್ಗಗಳನ್ನು ಅನುಸರಿಸಬೇಕು. ಉತ್ತಮ ಜೀವನ ಶೈಲಿಯನ್ನು ರೂಢಿಸಿಕೊಳ್ಳಬೇಕು. 1. ಪ್ರಾತಃ ಕಾಲದಲ್ಲಿ ಏಳುವುದು. 2. ವ್ಯಾಯಾಮ ಮತ್ತು ಧ್ಯಾನದ ಮಹತ್ವ ತಿಳಿದು–ಅನುದಿನ ಅಭ್ಯಾಸಿಸುವುದು. 3. ಪೌಷ್ಠಿಕ ಆಹಾರ ಸೇವಿಸುವುದು. ಎಷ್ಟು ಸೇವಿಸಿದೆ ಎನ್ನುವುದಕ್ಕಿಂತ ಏನನ್ನು ಸೇವಿಸಿದೆ ಎನ್ನುವುದಕ್ಕೆ ಪ್ರಾಮುಖ್ಯತೆ ಕೊಡುವುದು.

'ವ್ಯಾಯಾಮ' ಮತ್ತು ಆಹಾರ' ದೈಹಿಕ ಆರೋಗ್ಯಕ್ಕೆ ಪೋಷಣೆ ನೀಡುತ್ತದೆ. ಇದರಿಂದ ಬೌದ್ಧಿಕ ಶಕ್ತಿ ಬೆಳೆಸಬಹುದು. ಇದರ ಜೊತೆಗೆ ಪ್ರಾಜ್ಞರ ಸಹವಾಸ, ಕ್ರಮವಾದ ಅಧ್ಯಯನ, ಶ್ರವಣ, ಮನನ ಹೀಗೆ ಸಾಗಿದರೆ ಗುರಿ ಸಾಧನೆಗೆ ಸೂಕ್ತ ಮಾರ್ಗದರ್ಶನ ವಾಗುತ್ತದೆ. ನಮ್ಮ ಪ್ರತಿಭೆ ಬೆಳೆಸಿಕೊಳ್ಳಲು ನಮ್ಮ ವಿಚಾರ ಕ್ಷೇತ್ರಕ್ಕೆ ಸಂಬಂಧಿಸಿದ ತಂತ್ರಗಳನ್ನು ಅಳವಡಿಸಿಕೊಳ್ಳಬೇಕು. ಯಾವುದೇ ಕಾರಣಕ್ಕೂ ಆಲಸ್ಯ–ಅಲಕ್ಷ– ಅವಿವೇಕಕ್ಕೆ ಸ್ಥಳ ಕೊಡಬಾರದು. ಉತ್ತಮ ಹವ್ಯಾಸವನ್ನು ರೂಢಿಸಿಕೊಳ್ಳಬೇಕು. ಉದಾ: ಓದುವ ಹವ್ಯಾಸ, ಉತ್ತಮ ಗ್ರಂಥದಿಂದ ಸಂಗ್ರಹಿಸಿದ ಉತ್ತಮ ವಿಚಾರಗಳನ್ನು ಆಳವಾಗಿ ಅಧ್ಯಯನ ನಡೆಸಿ, ಜೀವನದಲ್ಲಿ ಅಳವಡಿಸಿಕೊಳ್ಳಬೇಕು.

'ಶಿಕ್ಷಣವೆಂದರೆ ಕೇವಲ ಮಾಹಿತಿ ತುಂಬುವುದಲ್ಲ, ಜೀವನದಲ್ಲಿ ಸಾಮರಸ್ಯವನ್ನು ಕಂಡುಕೊಳ್ಳುವುದಾಗಿದೆ.' ರವೀಂದ್ರನಾಥ ಟಾಗೋರ್ ಶಿಕ್ಷಣವೆಂದರೆ ಮನುಷ್ಯ ಹುಟ್ಟಿನಿಂದ ಸಾಯುವವರೆಗೆ ಗಳಿಸುವ ಅನುಭವವೇ ಶಿಕ್ಷಣ–ಜ್ಞಾನ ಪರಿಪೂರ್ಣತೆಯನ್ನು ಹಿಗ್ಗಿಸುವುದೇ ಶಿಕ್ಷಣ. ಆದುದರಿಂದ ಸೂಕ್ತ ಪರಿಸರ ಸನ್ನಿವೇಶಗಳಿಗೆ ಅನುಕೂಲವಾಗಿ ಉತ್ತಮ ಧ್ಯೇಯೋದ್ದೇಶಗಳೊಂದಿಗೆ ಮನಸ್ಸು ಕೆಲಸ ಮಾಡಲು ಉತ್ಸುಕವಾಗಿರುತ್ತದೆ. ಯೌವನದಲ್ಲಿ ಎಂಥಾ ಕಠಿಣ ಪರಿಸ್ಥಿತಿ, ಸಮಸ್ಯೆಗಳು ಎದುರಾದರೂ ಧೃತಿಗೆಡದೆ ಛಲಬಿಡದೆ, ಧೃಡಚಿತ್ತರಾಗಿ ಪ್ರಯತ್ನ ಮುಂದುವರೆಸಬೇಕು. ನಮ್ಮ ಚಿಂತನೆ– ಆಲೋಚನೆಗಳು ಸತ್ಯ ಎನ್ನುವ ದೃಢ ನಂಬಿಕೆ ಯಾವ ಕಾರಣಕ್ಕೂ ಕಳೆದುಕೊಳ್ಳಬಾರದು ಮತ್ತು ಇದರ ಜೊತೆಗೆ ಸಮಯ ಪ್ರಜ್ಞೆ ಇರಲೇಬೇಕು. ಈ ಎಲ್ಲವೂ ನಮಗೆ ಶ್ರೇಯಸ್ಸು ತಂದು ಕೊಡುತ್ತದೆ.

ಗುರಿಯ ಸಾಧನೆಗೆ, ಬುದ್ಧಿ ಬೆಳವಣಿಗೆಗೆ ಮತ್ತು ವಿದ್ಯೆಗೆ ಬಡತನವಿಲ್ಲ. ಹಣದಿಂದ ದೊರಕುವ ಸುಖಕ್ಕಿಂತ ವಿದ್ಯೆಯನ್ನು ಮೈಗೂಡಿಸಿಕೊಂಡರೆ ಗುರಿ ಸಾಧನೆಯಿಂದ ಜೀವನಕ್ಕೆ ಸುಖ–ಸಂತೋಷ ಲಭ್ಯವಾಗುತ್ತದೆ. **'ವಿದ್ಯಾ ದದಾತಿ ವಿನಯಂ ವಿನಯಾದ್ಯಾತಿ ಪಾತ್ರತಾಮ್। ಪಾತ್ರತ್ವಾದ್ಧನ ಮಾಪ್ನೋತಿ ಧನಾದ್ಧರ್ಮಂ ತತಃ ಸುಖಮ್'** ಎಂದರೆ ವಿದ್ಯೆ ವಿನಯವನ್ನು ಕೊಡುತ್ತದೆ. ವಿನಯದಿಂದ ಅರ್ಹತೆ ಬರುತ್ತದೆ. ಅರ್ಹತೆಯಿಂದ ಧನಪ್ರಾಪ್ತಿ, ಧನದಿಂದ ಗುರಿಯ ಸಾಧನೆಗೆ ಶ್ರದ್ಧೆಯಿಂದ ಜ್ಞಾನ ಸಂಪಾದಿಸಿ ಸೂಕ್ತ ಮಾರ್ಗದಲ್ಲಿ ಶ್ರವಣ–ಮನನ–ನಿರಂತರ ಅಧ್ಯಯನ ಪ್ರಧಾನವಾಗಿ ಮಥನದ ಅನುಭವದಿಂದ ಪ್ರಯತ್ನಿಸಿದರೆ ಸಾಧನೆ ಸಾಧ್ಯ. ಇಚ್ಛಾಶಕ್ತಿ, ದೃಢ ನಿರ್ಧಾರ, ಶ್ರದ್ಧೆಯಿಂದ ಮಾಡುವ ಸತತ ಪ್ರಯತ್ನವೇ ಗುರಿ ಸಾಧನೆಯ ದಾರಿ ದೀಪ■

ಸುದ್ದಿ ಸಂಗ್ರಹ

# ಹೃದಯ ತಪಾಸಣಾ ಶಿಬಿರ

ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮಂಡ್ಯ ಜಿಲ್ಲಾ ಘಟಕವು ಮಂಡ್ಯ ನಗರದಲ್ಲಿ ದಿನಾಂಕ 31/5/2014 ರಂದು ಇತರ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಉಚಿತ ಹೃದಯರೋಗ ತಪಾಸಣಾ ಶಿಬಿರವನ್ನು ಆಯೋಜಿಸಿತ್ತು. ಮೈಸೂರಿನ ನಾರಾಯಣ ಹೃದಯಾಲಯದ ವೈದ್ಯರು ಹಾಗೂ ತಂತ್ರಜ್ಞರ ತಂಡ 200ಕ್ಕೂ ಹೆಚ್ಚು ಜನರಿಗೆ ರಕ್ತದೊತ್ತಡ, ಸಕ್ಕರೆ ಅಂಶಪ್ರಮಾಣ, ಇ ಸಿ ಜಿ ಮತ್ತು ಎಕೋ ಪರಿಶೀಲನೆ ನಡೆಸಿ, ಸಮಾಲೋಚನೆ ಮೂಲಕ ಮುಂದೆ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಮಾರ್ಗದರ್ಶನ ನೀಡಿದರು.



ಕಾರ್ಯಕ್ರಮವನ್ನು ಉದ್ಘಾಟಿಸಿದ ಕೃಷಿಕ ಲಯನ್ಸ್ ಸಂಸ್ಥೆ ಪೋಷಕರಾದ ಲಯನ್ ಕೆ. ಟಿ. ಹನುಮಂತು ಬದಲಾದ ಆಹಾರ ಪದ್ದತಿಯಿಂದ ಮನುಷ್ಯರು ಅನೇಕ ರೋಗ ರುಜಿನಗಳಿಗೆ ಬಲಿಯಾಗುತ್ತಿದ್ದು, ಎಲ್ಲರೂ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕಾಗಿದೆ. ಜನರ ಆರೋಗ್ಯ ಸುಧಾರಣೆ ಹಾಗೂ ಜಾಗೃತಿ ಮೂಡಿಸಲು ಇಂತಹ ಶಿಬಿರಗಳು ಸಹಕಾರಿಯಾಗುತ್ತದೆ ಎಂದು ತಿಳಿಸಿದರು.

ಬದಲಾದ ಜೀವನ ಶೈಲಿ ಹಾಗೂ ಸೋಮಾರಿತನದಿಂದಾಗಿ ಜನರು ಇಂದು ಸುಲಭವಾಗಿ ಅನೇಕ ರೋಗಗಳಿಗೆ ತುತ್ತಾಗುತ್ತಿದ್ದಾರೆ. ಕನಿಷ್ಠ 45 ನಿಮಿಷ ಪ್ರತಿದಿನ ವ್ಯಾಯಾಮ ಮಾಡಿ ದೇಹದ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ನಾರಾಯಣ ಹೃದಯಾಲಯದ ತಜ್ಞ ವೈದ್ಯ ಡಾ|| ಲತಾ ಸಲಹೆ ನೀಡಿದರು. ಧೂಮಪಾನ, ಮದ್ಯಪಾನ, ಗುಟ್ಕಾದಂತಹ ಕೆಟ್ಟ ಚಟಗಳಿಂದ ದೂರವಿದ್ದು ಉತ್ತಮ ಹವ್ಯಾಸಗಳನ್ನು ಬೆಳೆಸಿಕೊಳ್ಳಲು ಕರೆ ನೀಡಿದರು.

ಮುಖ್ಯ ಅತಿಥಿಗಳಾಗಿ ಭಾಗವಹಸಿದ್ದ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಶ್ರೀ ಶಿವಾನಂದ ಸಿಂಧನಕೇರಾ ಮಾತನಾಡಿ ವೈದ್ಯ ವೃತ್ತಿ ಪವಿತ್ರವಾದ ವೃತ್ತಿ. ಜನರ ಆರೋಗ್ಯ ಸುಧಾರಣೆ ಮೂಲಕ, ಆರೋಗ್ಯ ಸಮಾಜ ಕಟ್ಟುವ ಕೆಲಸವನ್ನು ಅವರು ಮಾಡುತ್ತಿದ್ದಾರೆ, ಅವರು ಕೇವಲ ಆಸ್ಪತ್ರೆಯ ಕಟ್ಟಡಗಳಲ್ಲಿ ಕುಳಿತು ಕೆಲಸ ಮಾಡುವುದನ್ನು ಮಾತ್ರ ಮಾಡದೆ, ಇಂತಹ ಶಿಬಿರಗಳಲ್ಲಿ ಹೆಚ್ಚು ಹೆಚ್ಚು ಭಾಗವಹಿಸುವುದರ ಮೂಲಕ ಜನರಿಗೆ ಹತ್ತಿರವಾಗಿ ಸಮಾಜಮುಖಿಯಾಗಿರಬೇಕೆಂದು ಕರೆ ನೀಡಿದರು.

'ಸಂಸ್ಕೃತಿ' ಸಂಘಟನೆಯ ಶ್ರೀ ಕೆ. ಪ್ರಹ್ಲಾದ್‌ರಾವ್ ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಮಾಧ್ಯಮಿಕ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ಚಿಕ್ಕಸ್ವಾಮಿ ಪ್ರಾಸ್ತವಿಕ ಮಾತುಗಳನ್ನಾಡಿ ಎಲ್ಲರನ್ನೂ ಸ್ವಾಗತಿಸಿದರು. ಜಿಲ್ಲಾ ಸಂಘದ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್ ಕಾರ್ಯದರ್ಶಿ ಪುಟ್ಟಸ್ವಾಮಿ, ಖಜಾಂಚಿ ಬಿ.ಟಿ ಕೃಷ್ಣ, ಪ್ರೌಢಶಾಲಾ ಶಿಕ್ಷಕರಾದ ಪುಟ್ಟಸ್ವಾಮಿ, ಉಷಾ, ಬಿ.ಜಿ ಉಮಾ, ಪದವಿಪೂರ್ವ ಕಾಲೇಜು ಉಪನ್ಯಾಸಕರಾದ ಲಿಂಗೇಗೌಡ, ನರಸಿಂಹೇಗೌಡ, ತಮ್ಮೇಗೌಡ, ಕೃಷ್ಣ, ಸಾಹಿತಿ ಧರಣೇಂದ್ರಯ್ಯ, ಭಾರತ್ ವಿಕಾಸ್ ಅಧ್ಯಕ್ಷರಾದ ಚನ್ನಸಂದ್ರ ಮಹದೇವು, ಯುವ ರಾಷ್ಟ್ರಪ್ರಶಸ್ತಿ ವಿಜೇತ ಕಾರಸವಾಡಿ ಮಹದೇವ್ ಇನ್ನಿತರರು ಉಪಸ್ಥಿತರಿದ್ದರು. ಶಿಕ್ಷಕಿ ವೀಣಾ ಕಾರ್ಯಕ್ರಮ ನಿರೂಪಿಸಿ ವಂದಿಸಿದರು.

**ವರದಿ : ಶ್ರೀ ಚಿಕ್ಕಸ್ವಾಮಿ,** ಮಂಡ್ಯ ಅಧ್ಯಕ್ಷರು, ಕರ್ನಾಟಕ ರಾಜ್ಯಮಾಧ್ಯಮಿಕ ಶಿಕ್ಷಕ ಸಂಘ

---

**ಆತ್ಮಶ್ರದ್ಧೆ ಇಂದು ನನಗೆ ಬೇಕಾಗಿದೆ, ನಿಮಗೆಲ್ಲಾ ಬೇಕಾಗಿದೆ. ಇದನ್ನು ಪಡೆದುಕೊಳ್ಳುವ ಮಹಾ ಸಾಹಸ ನಿಮ್ಮ ಮುಂದೆ ಇದೆ. ಎಲ್ಲವನ್ನೂ ಹಾಸ್ಯ ಮಾಡುವ, ಹುಡುಗಾಟಿಕೆಯ ಸ್ವಭಾವ ನಮ್ಮ ಜನಾಂಗದ ಜೀವನದ ಮೇಲೆ ದಾಳಿ ಇಡುತ್ತಿದೆ. ಅದನ್ನು ತ್ಯಜಿಸಿ ಧೀರರಾಗಿ, ಶ್ರದ್ಧಾವಂತರಾಗಿ, ಉಳಿದುದೆಲ್ಲವೂ ಸ್ವಾಭಾವಿಕವಾಗಿಯೇ ಸಿದ್ಧಿಸುವುದು.**

**– ಸ್ವಾಮಿ ವಿವೇಕಾನಂದ**

**ಯಾರ ಕೃಪೆಯು ಮೂಖನನ್ನು ವಾಚಾಳಿಯನ್ನಾಗಿ ಮಾಡುವುದೋ, ಕುಂಟನು ಪರ್ವತವನ್ನು ಲಂಘಿಸುವಂತೆ ಮಾಡುವುದೋ ಅಂತಹ ಪರಮಾನಂದ ಸ್ವರೂಪನಾದ ಮಾಧವನನ್ನು ವಂದಿಸುತ್ತೇನೆ.**

**– ಭಗವದ್ಗೀತೆ**

➢ ಪುಟ 6 ರಿಂದ..... **ಲೋಕಮಾನ್ಯ ತಿಲಕ್**

ಸುಧಾರಣೆಗಳನ್ನು ಮುಂದಿಟ್ಟರು. ಮದ್ಯಪಾನ ನಿಷೇಧದ ಪರವಾಗಿ ಅವರಿಗೆ ಅತ್ಯಂತ ಕಳಕಳಿಯಿತ್ತು. ಶಿಕ್ಷಣ ಹಾಗೂ ರಾಜಕೀಯ ಜೀವನದ ಬಗ್ಗೆ ಅವರ ವಿಚಾರಗಳು ಬಹಳ ಪ್ರಭಾವಶಾಲಿಯಾಗಿದ್ದವು– ದೇವನಾಗರಿ ಲಿಪಿಯಲ್ಲಿ ಬರೆಯಲಾಗುವ ಹಿಂದಿ ಭಾಷೆಯು ಭಾರತದ ರಾಷ್ಟ್ರಭಾಷೆ ಯಾಗಬೇಕು ಎಂದು ಮೊದಲು ಸೂಚಿಸಿದವರು ತಿಲಕರು. ಗಾಂಧೀಜಿ ಇದನ್ನು ಮುಂದೆ ಬಲವಾಗಿ ಅನುಮೋದಿಸಿದರು. ಆದರೆ ತಿಲಕರು ಸಂಪೂರ್ಣವಾಗಿ ಭಾರತದಿಂದ ನಿರ್ಮೂಲನ ಮಾಡಬೇಕೆಂದು ಇಚ್ಛೆಪಟ್ಟಿದ್ದ ಇಂಗ್ಲೀಷ್ ಭಾಷೆ, ಇಂದಿಗೂ ಸಂವಹನದ ಒಂದು ಮುಖ್ಯ ಸಾಧನವಾಗಿ ಉಳಿದುಕೊಂಡು ಬಂದಿದೆ. ಆದರೂ ಹಿಂದಿ (ಮತ್ತು ಇತರ ಭಾರತೀಯ ಭಾಷೆಗಳ) ಜನಸಾಮಾನ್ಯರ ಮಟ್ಟದಲ್ಲಿ ಬಳಕೆ ಮತ್ತು ಬ್ರಿಟಿಷರ ಕಾಲದಿಂದ ಇಂದಿನವರೆಗೂ ನೀಡಲಾಗುತ್ತಿರುವ ಪ್ರೋತ್ಸಾಹಕ್ಕೆ ತಿಲಕರು ಅಂದು ಪ್ರಾರಂಭಿಸಿದ ಪುನರುಜ್ಜೀವನವೇ ಕಾರಣ ಎನ್ನಲಾಗುತ್ತದೆ. ತಿಲಕರ ಮತ್ತೊಂದು ದೊಡ್ಡ ಕಾಣಿಕೆಯೆಂದರೆ, ಸಾರ್ವಜನಿಕ ಗಣೇಶೋತ್ಸವ. ಭಾದ್ರಪದ ಶುಕ್ಲ ಚುತುರ್ಥಿಯಿಂದ ಹಿಡಿದು ಅನಂತ ಚತುರ್ದಶಿಯವರೆಗಿನ 11 ದಿನಗಳ ಈ ಉತ್ಸವ, ಖಾಸಗೀ ಧಾರ್ಮಿಕ ಆಚರಣೆಯನ್ನು ಜನಸಾಮಾನ್ಯರು ಒಟ್ಟುಗೂಡಿ ಆಚರಿಸುವ, ನಾಯಕರುಗಳಿಗೆ ಜನಸಾಮಾನ್ಯ ರೊಂದಿಗೆ ಸಂಪರ್ಕ ಸಾಧಿಸುವ ಮಾಧ್ಯಮವಾಗಿ ಮಹಾರಾಷ್ಟ್ರ ದಲ್ಲಿ ಇಂದಿಗೂ ಮುಂದುವರಿಯುತ್ತಿದೆ. ಪರದೇಶೀ ವಸ್ತುಗಳನ್ನು ಬಹಿಷ್ಕರಿಸುವಂತೆ ಅವರು ನೀಡಿದ ಕರೆ ಬಹಳಷ್ಟು ಭಾರತೀಯರಲ್ಲಿ ದೇಶಭಕ್ತಿಯನ್ನು ಉಕ್ಕಿಸಿತು. ತಿಲಕರು ಒಂದು ಕಾಲದಲ್ಲಿ ತೀವ್ರವಾದಿ ಕ್ರಾಂತಿಕಾರಿಯೆಂದು ಪರಿಗಣಿಸಲ್ಪಟ್ಟಿದ್ದರೂ, ನಂತರದ ವರ್ಷಗಳಲ್ಲಿ ಅವರು ಗಮನಾರ್ಹವಾಗಿ ಬದಲಾಗಿದ್ದರು. ಭಾರತ ಸ್ವಾತಂತ್ರ ಗಳಿಸಲು, ಮಾತುಕತೆಗಳ ಮೂಲಕವೇ ಹೆಚ್ಚು ಪರಿಣಾಮಕಾರಿ ಎಂಬ ಬಗ್ಗೆ ಅವರಿಗೆ ಒಲವಿತ್ತು. ಸ್ವರಾಜ್ಯ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಹೋರಾಟವನ್ನು ಜನಸಾಮಾನ್ಯರವರೆಗೆ ಕೊಂಡೊಯ್ದ ತಿಲಕರನ್ನು 'ಸ್ವಾತಂತ್ರ್ಯ ಚಳುವಳಿಯ ಜನಕ' ಎಂದು ಪರಿಗಣಿಸಲಾಗಿದೆ. ಭಾರತೀಯ ಸಂಸ್ಕೃತಿ, ಇತಿಹಾಸ ಹಾಗೂ ಧರ್ಮದ ಬಗ್ಗೆ ಲೇಖನಗಳಿಂದ ಲಕ್ಷಾಂತರ ಭಾರತೀಯರಿಗೆ ತಮ್ಮ ಭವ್ಯ ಪರಂಪರೆಯ ಹಾಗೂ ನಾಗರೀಕತೆಗಳ ಅರಿವು ಮಾಡಿಕೊಟ್ಟು, ಅವರ ಪ್ರಜ್ಞೆಯಲ್ಲಿ ತಮ್ಮ ನಾಡಿನ ಬಗ್ಗೆ ಅಭಿಮಾನವನ್ನು ಮೂಡಿಸಿದರು. ತಿಲಕರನ್ನು ಭಾರತದ ರಾಜಕೀಯ ಹಾಗೂ ಆಧ್ಯಾತ್ಮಿಕ ನಾಯಕರನ್ನಾಗಿಯೂ, ಮಹಾತ್ಮಾ ಗಾಂಧಿಯವರನ್ನು ಇವರ ಉತ್ತರಾಧಿಕಾರಿ ಯಾಗಿಯೂ ಅನೇಕರು ಪರಿಗಣಿಸುತ್ತಾರೆ. 1920 ರಲ್ಲಿ ತಿಲಕರು ತೀರಿಕೊಂಡಾಗ, ಅವರ ಅಂತ್ಯಕ್ರಿಯೆಯಲ್ಲಿ ಭಾಗವಹಿಸಿದ 200000 ಜನರಲ್ಲಿ ಒಬ್ಬರಾದ ಮಹಾತ್ಮಾ ಗಾಂಧಿಯವರು ತಿಲಕರನ್ನು 'ಆಧುನಿಕ ಭಾರತದ ಜನಕ' ಎಂದು ಬಣ್ಣಿಸಿದರು. ■

# ವ್ಯಕ್ತಿತ್ವದ ಪ್ರಮುಖ ಲಕ್ಷಣಗಳು

1. **ಆಧುನಿಕ ವಿಜ್ಞಾನ ಮತ್ತು ತಂತ್ರಜ್ಞಾನದ – ಐಟಿ, ಕಂಪ್ಯೂಟರ್ ಇತ್ಯಾದಿ – ಪ್ರಗತಿಗೆ, ಬೆಳವಣಿಗೆಗೆ ಸಹಕಾರಿಯಾಗಿರುವುದು.**
2. **ಜನರ ಭಾವನೆ ಹಾಗೂ ಚಿಂತನೆಗಳನ್ನು ಅರ್ಥ ಮಾಡಿಕೊಳ್ಳುವುದು.**
3. **ಜನರ ಉದ್ವೇಗ ಹಾಗೂ ಮನೋವ್ಯಾಕುಲತೆಗಳ ನಿವಾರಣೆ.**
4. **ದೂರದ ಗುರಿಗಳನ್ನು ಸಾಧಿಸಲು ಸಾಮಾಜಿಕ ಧೋರಣೆಗಳ ಚೌಕಟ್ಟನ್ನು ರೂಪಿಸುವುದು.**
5. **ಅಗತ್ಯಗಳನ್ನು ಪೂರೈಸಿಕೊಳ್ಳುವಲ್ಲಿ ಎದುರಾಗುವ ಸಮಸ್ಯೆಗಳನ್ನು ನಿವಾರಣೆ ಮಾಡುವುದು.**
6. **ಅನಾವಶ್ಯಕ ಉದ್ವೇಗ ಮತ್ತು ಮಾನಸಿಕ ಒತ್ತಡಗಳನ್ನು ನಿಯಂತ್ರಿಸಲು ಧ್ಯೇಯ ಧೋರಣೆಗಳ ಪ್ರಮಾಣವನ್ನು ಸೀಮಿತಗೊಳಿಸುವುದು.**

✍ **ಮರ್ರೆ ಮತ್ತು ಕ್ಲಕೊಹ್ನ**

# ಶ್ರದ್ಧಾಂಜಲಿ

**ದಿನಾಂಕ 1–6–2014 ರಂದು ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಮೈಸೂರು ಘಟಕದ ಕಾರ್ಯಕರ್ತರಾದ ಶ್ರೀ ಗುರು ನಂಜಯ್ಯನವರ ಧರ್ಮಪತ್ನಿ ಡಾ. ಬಿ. ಎಂ. ಶೈಲಜಾ, ಕನ್ನಡ ಸಹ ಪ್ರಾಧ್ಯಾಪಕರು, ಮಾನಸ ಗಂಗೋತ್ರಿ ಇವರು ದೈವಾಧೀನರಾದುದು ದುಃಖದಾಯಕ. ಶ್ರೀ ಗುರುನಂಜಯ್ಯನವರು ಹಾಗೂ ಕುಟುಂಬದವರು ಈ ಅಪಾರ ದುಃಖವನ್ನು ಭರಿಸುವ ಶಕ್ತಿಯನ್ನು ಕರುಣಿಸುವಂತೆ ಹಾಗೂ ಮೃತರಿಗೆ ಸದ್ಗತಿಯನ್ನು ನೀಡುವಂತೆ ಭಗವಂತನಲ್ಲಿ ಶಿಕ್ಷಕ ಸಂಘವು ಪ್ರಾರ್ಥಿಸುತ್ತದೆ.**

**ತಾವರೆಯ ಎಲೆಯ ಮೇಲಿರುವ ನೀರಿನ ಬಿಂದುವಿನಂತೆ ಜೀವನವೂ ಅತ್ಯಂತ ಚಂಚಲವಾದುದು– ಶಂಕರಾಚಾರ್ಯರು**


# ವಿದ್ಯಾರ್ಥಿ ಮಿತ್ರ – 8

**1. ರಸಪ್ರಶ್ನೆ**

ವಿಜಯನಗರ ಸಾಮ್ರಾಜ್ಯದ ಶ್ರೀಕೃಷ್ಣ ದೇವರಾಯನ ಆಸ್ಥಾನದಲ್ಲಿದ್ದ ಅಷ್ಟದಿಗ್ಗಜರಲ್ಲಿ ಒಬ್ಬರಾದ ತೆನಾಲಿ ರಾಮಕೃಷ್ಣನು 'ಪಾಂಡುರಂಗ ಮಹಾತ್ಮೆ' ಎಂಬ ಕೃತಿಯನ್ನು ರಚಿಸಿದ್ದನು.
ಈ ಕೆಳಗಿನವರು ಯಾವ ಗ್ರಂಥ ರಚಿಸಿದರೆಂದು ಹೇಳಬಲ್ಲಿರಾ ?

ಅ) ಅಲ್ಲಸಾನಿಪೆದ್ದನ್ನ ಆ) ನಂದಿ ತಿಮ್ಮಣ್ಣ ಇ) ರಾಮಭದ್ರುಡು
ಈ) ಮಲ್ಲಣ್ಣ ಉ) ಪಿಂಗಳ ಸೂರಣ್ಣ ಊ) ದೂರ್ಜಟಿ ಋ) ರಾಮರಾಜ್ಯ ಭೂಷಣಡು

**2. ಈ ಪ್ರಾಣಿಗಳನ್ನು ಗುರುತಿಸಬಲ್ಲಿರಾ ?**




**3. ಈ ಗಾದೆಗಳ ಉಳಿದರ್ಧ ಗಾದೆಗಳನ್ನು ಹೇಳಬಲ್ಲಿರಾ ?**

1. ಆಕಾಶದ ಮಳೆ ...
2. ಆರಿದ್ರಾ ಬಂದರೆ...
3. ಚಿತ್ತಾ ಮಳೆ...
4. ಹಿಡಿ ಬಿತ್ತಿ...
5. ಹತ್ತು ಹಳ್ಳಿ ತಿರುಗುವುದರ ಬದಲು...

**4. 4. ಈ ಅಕ್ಷರಗಳನ್ನು ಸರಿಯಾಗಿ ಜೋಡಿಸಿ ಅರ್ಥಪೂರ್ಣ ಪದಗಳನ್ನು ರಚಿಸಿರಿ.**

ಉದಾ:–ಣಶಿಕ್ಷ ಉತ್ತರ : ಶಿಕ್ಷಣ

1. ಪಾನೆಲಶುಪ
2. ಮಾರೆತಹಿಇತಿ
3. ಗೆರಿಸಂಸಾರ್ಕಪ
4. ಜ್ಞಾತ್ಞಂನತ್ರ
5. ಕಿಅಂಅಂಶ
6. ಘಮಶ್ಚಿಪಟ್ಟ
7. ತಣಿಶ್ರೇರ್ವಪ
8. ಚೀನಲಪ್ರಾಕಾ
9. ತೆಗಕನಾರಿ
10. ಕದಿಯುವೈಗ

## ವಿದ್ಯಾರ್ಥಿ ಮಿತ್ರ – 7 ರ ಉತ್ತರ

**1. ರಸಪ್ರಶ್ನೆ** : ಅ) ಕಾವೇರಿ ; ಆ) ಕಾಳಿ ; ಇ) ಕೃಷ್ಣಾ; ಈ) ಅಘನಾಶಿನಿ ; ಉ) ಬೇಡ್ತಿ

**2. ಮರಗಳು :** 1) ತೆಂಗಿನಮರ ; 2) ಮಾವಿನಮರ ; 3) ಬಾಳೆ ಮರ (ಗಿಡ) ; 4) ಪರಂಗಿಮರ

**3. ಈ ಒಗಟುಗಳು ?** 1. ಮಾತೇ ಮೃತ್ಯು ; 2. ಕಾಲುಚಾಚು ; 3. ಐದು ಬೆರಳು ಬಾಯಿಗೆ ಹೋದೀತು ; 4. ಆಳಿಗೊಂದು ಕಲ್ಲು ; 5. ಹಿರಿಯರ ಮುಂದೆ ಹಿಗ್ಗೋದು ಬೇಡ

**4. ಅಕ್ಷರ ಜೋಡಿಸಿ :** ಪುರಂದರದಾಸ, ಜಗನ್ನಾಥದಾಸ, ಕುಮಾರ ವಾಲ್ಮೀಕಿ, ಅಲ್ಲಮಪ್ರಭು, ಕುಮಾರವ್ಯಾಸ, ಬಸವೇಶ್ವರ, ರಾಘವಾಂಕ, ಅಕ್ಕಮಹಾದೇವಿ, ಕನಕದಾಸ, ಗೋಪಾಲದಾಸ

(ಉತ್ತರಗಳು ಮುಂದಿನ ಸಂಚಿಕೆಯಲ್ಲಿ...)

– ವಿ. ರಾಜ, ಅಧ್ಯಾಪಕರು, ನ್ಯಾಷನಲ್ ಹೈಸ್ಕೂಲ್, ಬೆಂಗಳೂರು

# ಸಾಮಾಜಿಕ ಮೌಲ್ಯಗಳನ್ನು ಕಲಿಸುವ ಬಗೆ

ಕಳೆದ ನಾಲ್ಕೈದು ಸಂಚಿಕೆಗಳಿಂದ ನಾವು ಭಾರತೀಯ ಜೀವನ ಮೌಲ್ಯಗಳ ಬಗ್ಗೆ ತಿಳಿಯುತ್ತಾ ಬಂದಿದ್ದೇವೆ. ಇದರಲ್ಲಿ ವೈಯುಕ್ತಿಕ ಮೌಲ್ಯ (Individual Values) ಮತ್ತು ಕೌಟುಂಬಿಕ ಮೌಲ್ಯ (Family values)ಗಳ ಬಗ್ಗೆ ಸ್ವಲ್ಪ ಮಟ್ಟಿಗೆ ಪರಿಚಯವಾಗಿದೆ. ಈ ಲೇಖನದಲ್ಲಿ ಸಾಮಾಜಿಕ ಮೌಲ್ಯದ (Social values) ಬಗ್ಗೆ ತಿಳಿಯೋಣ.

ಭಾರತೀಯ ಚಿಂತನೆಯಲ್ಲಿ, ಸಮಾಜವೆಂದರೆ ಏಕ ಭಾವನೆಗಳನ್ನು ಹೊಂದಿರುವ ವ್ಯಕ್ತಿಗಳ ಸಮುಚ್ಚಯ. ಸಮಾಜ ಜೀವನವು ಸದೃಢವಾಗಿ, ಸುಸೂತ್ರವಾಗಿ ನಡೆಯಲು ಸಮಾಜದ ಪ್ರತಿ ಘಟಕನೂ ಪಾಲಿಸಬೇಕಾದ ನೀತಿ ನಿಯಮಗಳನ್ನು ನಾವು ಸಾಮಾಜಿಕ ಮೌಲ್ಯ ಎಂದು ಕರೆಯುತ್ತೇವೆ.

ವಿವಿಧ ಸಾಮಾಜಿಕ ಮೌಲ್ಯಗಳಲ್ಲಿ ಈ ಕೆಳಗಿನ ಐದು ಅಂಶಗಳು ಅತ್ಯಂತ ಮುಖ್ಯವಾದುದು.

1. ಸಹಬಾಳ್ವೆ 2. ನಾಗರೀಕ ಪ್ರಜ್ಞೆ 3. ಪರಿಸರ ಪ್ರಜ್ಞೆ 4. ಕಾನೂನು ಪ್ರಜ್ಞೆ

### ಸಹಬಾಳ್ವೆ

ನಮ್ಮ ಸಮಾಜದಲ್ಲಿ ಸಮಾಜದ ಎಲ್ಲಾ ಘಟಕಗಳೂ ಪರಸ್ಪರ ಅವಲಂಬಿತರು. ಯಾರೂ ಸ್ವತಂತ್ರರಲ್ಲ. ರೈತ ಹತ್ತಿ ಬೆಳೆದರೆ, ನೇಕಾರ ನೂಲು ತೆಗೆದು ಬಟ್ಟೆ ನೇಯಬೇಕು. ನೇಯ್ದ ಬಟ್ಟೆಯನ್ನು ದರ್ಜಿ ಹೊಲಿದು ಸಿದ್ದಪಡಿಸಬೇಕು. ಹೀಗೆ ರೈತ, ನೇಕಾರ ಹಾಗೂ ದರ್ಜಿ ಇವರು ಮೂರೂ ಜನ ಕೈಜೋಡಿಸಿದರೆ ಮಾತ್ರ ಒಂದು ಸಿದ್ದ ಉಡುಪು ತಯಾರಾದೀತು. ಶತ ಶತಮಾನಗಳಿಂದ ಭಾರತೀಯ ಸಮಾಜ ಜೀವನ ನಡೆದುಬಂದಿರುವ ರೀತಿ ಇದು. ಮುಂದೂ ಸಹ ಸಮಾಜದ ಏಳ್ಗೆಗೆ ಇದೇ ರಾಜಮಾರ್ಗ. ಇಲ್ಲಿ ಮೇಲು ಕೀಳೆಂಬ ಭೇದವಿಲ್ಲ. ಎಲ್ಲರೂ ಸಮಾನರು. ಎಲ್ಲರೂ ಸಹೋದರರು. ಆದರೆ ಇಂದು ರಾಜಕೀಯ ಕಾರಣಗಳಿಂದಾಗಿ ನಾವು ಪರಸ್ಪರರನ್ನು ಜಾತಿ, ಮತ, ಭಾಷೆಗಳ ಆಧಾರದ ಮೇಲೆ ವಿಂಗಡಿಸಿಕೊಂಡು ವೈಮನಸ್ಯದ ವಾತಾವರಣ ಸೃಷ್ಟಿಸುತ್ತಿದ್ದೇವೆ. ಈ ವಾತಾವರಣವನ್ನು ನಾವು ಶಾಲಾ ದಿನಗಳಿಂದಲೇ ಬದಲಿಸಬೇಕು. ಏಕತೆಯ, ಸಮಾನತೆಯ ಭಾವವನ್ನು ಎಳೆ ಹೃದಯಗಳಲ್ಲಿ ಚಿಮ್ಮಿಸಬೇಕು. ಈ ಸಮಯದಲ್ಲಿ ಅರವತ್ತು ವರ್ಷಗಳ ಹಿಂದೆ ಶಾಲೆಯಲ್ಲಿ ನನ್ನ ಅಧ್ಯಾಪಕರು ಹೇಳಿದ ಕಥೆ ನೆನಪಿಗೆ ಬರುತ್ತಿದೆ.

ರೈತನೊಬ್ಬನಿಗೆ ನಾಲ್ವರು ಮಕ್ಕಳು. ವಯಸ್ಸಿಗೆ ಬಂದನಂತರ ಪರಸ್ಪರ ಕಚ್ಚಾಡತೊಡಗಿದರು. ಮನೆ ರಣರಂಗವಾಯ್ತು ರೈತನಿಗೆ ಚಿಂತೆ ಹತ್ತಿತು. ಮುದುಕ ಹಾಸಿಗೆ ಹಿಡಿದ. ಒಂದು ದಿನ ತಂದೆ ನಾಲ್ಕೂ ಮಕ್ಕಳನ್ನು ಬಳಿಗೆ ಕರೆದು ಎಲ್ಲರಿಗೂ ಎರಡಡಿ ಉದ್ದದ ಕಡ್ಡಿ ತರಲು ಹೇಳಿದ. ತಂದೆ ವಿಶೇಷವೇನೋ ಹೇಳಬಹುದೆಂಬ ಆಸೆಯಿಂದ ಎಲ್ಲರೂ ಅಳತೆಮಾಡಿ ಕಡ್ಡಿ ತಂದರು. ಅಪ್ಪ ಮಕ್ಕಳಿಗೆ ಕಡ್ಡಿ ಎರಡು ತುಂಡು ಮಾಡಲು ಹೇಳಿದ. ಎಲ್ಲರೂ ಎರಡು ಭಾಗ ಮಾಡಿದರು. ಎಂಟೂ ಭಾಗವನ್ನು ತನ್ನ ಕೈಗೆ ತೆಗೆದುಕೊಂಡು ಅದಕ್ಕೆ ಬಲವಾದ ದಾರ ಸುತ್ತಿ ಅದನ್ನು ಈಗ ಮತ್ತೆ ಮುರಿಯಲು ಹೇಳಿದ. ನಾಲ್ವರಲ್ಲಿ ಯಾರಿಗೂ ಅದನ್ನು ಮುರಿಯಲಾಗಲಿಲ್ಲ. ಮುದುಕ ರೈತನ ಪ್ರಯೋಗ ಮಕ್ಕಳಿಗೆ ಪಾಠ ಕಲಿಸಿತು. ಎಲ್ಲರೂ ಸಹಬಾಳ್ವೆಯಿಂದ ಬದುಕಿ ನೆಮ್ಮದಿ ಪಡೆದರು.

ಇಂಥ ಕಥೆಗಳು ಪುಟ್ಟಮನಸ್ಸಿನಲ್ಲಿ ಸಹಬಾಳ್ವೆಯ ಬೀಜ ಬಿತ್ತುತ್ತವೆ. ಸಂತ ಕನಕದಾಸರ, ಕಬೀರರ, ಬಸವಣ್ಣನವರ ಬದುಕಿನ ಕಥೆ ಹೇಳಿ ಅವರ ವಚನಗಳನ್ನು ಕಲಿಸಿದರೆ ಜಾತಿ ಮತಗಳ ಭೇದ ಇರಬಾರದು ಎಂಬ ಅರಿವು ಮೂಡುತ್ತದೆ. ಈ ಪಂಚತಂತ್ರದ ಕಥೆ ಹೇಳಿ ನೋಡಿರಿ. ಪಾರಿವಾಳಗಳ ಕುಲವೊಂದು ಕಾಡಿನಲ್ಲಿ ಕಾಳು ಮೇಯುವಾಗ ಬೇಡನೊಬ್ಬನ ಬಲೆಗೆ ಸಿಕ್ಕಿ ಬಿದ್ದಿತು. ಪಾರಿವಾಳಗಳ ರಾಜ ಧೃತಿಗೆಡದೆ ಸಂಘಟಿತ ಪ್ರಯತ್ನದ ಪಾಠ ಹೇಳಿ ಒಟ್ಟಿಗೆ ಹಾರಲು ಪ್ರೇರೇಪಿಸಿದ. ಎಲ್ಲವೂ ಒಟ್ಟಿಗೆ ಹಾರಿ ಬೇಡನಿಂದ ತಪ್ಪಿಸಿಕೊಂಡವು. ಪಂಚತಂತ್ರದ ಈ ಕಥೆ ಕೂಡ ಸಹಬಾಳ್ವೆಯ ಸಿದ್ಧಾಂತವನ್ನೇ ಪ್ರತಿಪಾದಿಸುತ್ತದೆ ಅಲ್ಲವೇ?

ಎಚ್. ನಾಗಭೂಷಣರಾವ್
ಪೋಷಕರು, ಕರ್ನಾಟಕ ರಾಜ್ಯ
ಮಾಧ್ಯಮಿಕ ಶಿಕ್ಷಕ ಸಂಘ (ರಿ.)



# ಸೂಗೂರು ತಿಪ್ಪೇಸ್ವಾಮಿಯವರಿಗೆ ಡಾಕ್ಟರೇಟ್ ಪ್ರದಾನ




ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಬೆಂಗಳೂರು ಉತ್ತರ ಜಿಲ್ಲೆಯ ಹೆಮ್ಮೆಯ ಅಧ್ಯಕ್ಷರಾದ ಡಾ॥ ಸೂಗೂರು ತಿಪ್ಪೇಸ್ವಾಮಿಯವರ ಮುಡಿಗೆ ಮತ್ತೊಂದು ಗರಿ ಮೂಡಿದೆ. ತಿಪ್ಪೇಸ್ವಾಮಿಯವರ ಅತ್ಯಮೂಲ್ಯ ಸೇವೆಯನ್ನು ಗುರುತಿಸಿ ಕೊಲಂಬೊ ಇಂಟರ್‌ನ್ಯಾಷನಲ್ ವಿಶ್ವವಿದ್ಯಾಲಯವು "ಗೌರವ ಡಾಕ್ಟರೇಟ್" (D.Litt) ಪ್ರಶಸ್ತಿಯನ್ನು ಮಲೇಷಿಯಾದ ರಾಜಧಾನಿ ಕೌಲಾಲಂಪುರದಲ್ಲಿ 2014ರ ಮೇ 4 ರಂದು ನೀಡಿ ಗೌರವಿಸಿದೆ. ಶ್ರೀಯುತರಿಗೆ ಕರ್ನಾಟಕ ರಾಜ್ಯ ಮಾಧ್ಯಮಿಕ ಶಿಕ್ಷಕ ಸಂಘದ ಹೃತ್ಪೂರ್ವಕ ಅಭಿನಂದನೆಗಳು.

ಡಾ॥ ಸೂಗೂರು ತಿಪ್ಪೇಸ್ವಾಮಿಯವರು ಗಡಿನಾಡ ಕನ್ನಡಿಗರಾಗಿ ಗ್ರಾಮೀಣ ಪ್ರದೇಶದ ರೈತಾಪಿ ಕುಟುಂಬದಲ್ಲಿ ಜನಿಸಿದವರು. ಇವರು ತಮ್ಮ ವಿದ್ಯಾಭ್ಯಾಸದ ನಂತರ ತಮ್ಮ ಜೀವನವನ್ನು ತಾವು ಜನಿಸಿದ ಹಳ್ಳಿಗಾಗಿ ಸಮಾಜಸೇವೆಗಾಗಿ ಹಾಗೂ ಶಿಕ್ಷಣ ಕ್ಷೇತ್ರಕ್ಕಾಗಿ ಮುಡಿಪಾಗಿಟ್ಟಿರುತ್ತಾರೆ. ಇವರು ಮೂರು ಮಹಾನ್ ಸಂಸ್ಥೆಗಳನ್ನು ಸ್ಥಾಪಿಸಿರುತ್ತಾರೆ. ಅವುಗಳೆಂದರೆ "ಬಾಪೂಜಿ ಸೇವಾ ಸಂಸ್ಥೆ, ರಾಧಾಕೃಷ್ಣ ವಿದ್ಯಾಸಂಸ್ಥೆಗಳು ಮತ್ತು ವಿವೇಕಾನಂದ ಸಾರ್ವಜನಿಕ ಸಂಸ್ಥೆ".

ಶ್ರೀಯುತರು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ಶಿಕ್ಷಣ ಇಲಾಖೆಯ ಸಂಪನ್ಮೂಲ ವ್ಯಕ್ತಿಯಾಗಿ ತಮ್ಮ ಜ್ಞಾನವನ್ನು ಧಾರೆಯೆರೆಯುತ್ತಿದ್ದಾರೆ.

ಡಾ॥ ತಿಪ್ಪೇಸ್ವಾಮಿಯವರ ಪ್ರತಿಭೆ ಮತ್ತು ಸೇವೆಯನ್ನು ಗುರುತಿಸಿ ಸರ್ಕಾರ ಮತ್ತು ಸಂಘ ಸಂಸ್ಥೆಗಳು ಹಲವಾರು ಪ್ರಶಸ್ತಿಗಳನ್ನು ನೀಡಿ ಗೌರವಿಸಿದೆ.

ಅವರಿಗೆ ಸಂದಿರುವ ಪ್ರಶಸ್ತಿಗಳು: * ಭಾರತ್ ವಿಭೂಷಣ್ ಸನ್ಮಾನ್ ಪುರಸ್ಕಾರ * ಜಿಲ್ಲಾಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ * ನಾಡಪ್ರಭು ಕೆಂಪೇಗೌಡ ಪ್ರಶಸ್ತಿ * ಗ್ಲೋಬಲ್ ಅಚೀವರ್ಸ್ ಪ್ರಶಸ್ತಿ * ಟ್ರೈನ್ ದ ಟ್ರೈನರ್ಸ್ ಪ್ರಶಸ್ತಿ * ಸನ್ ಶೈನ್ ಟೋಸ್ಟ್ ಮಾಸ್ಟರ್ ಪ್ರಶಸ್ತಿ * ಉತ್ತಮ ಸಮಾಜ ಸೇವಕ ಪ್ರಶಸ್ತಿ * ಪ್ರೈಡ್ ಆಫ್ ಇಂಡಿಯಾ ಪ್ರಶಸ್ತಿ * ಏಶಿಯಾ ಪೆಸಿಫಿಕ್ ಇಂಟರ್‌ನ್ಯಾಷನಲ್ ಪ್ರಶಸ್ತಿ.


Registered no/RNP/ KA/ BGS-125/2012-14
CPMG/KA/BGS-125/2012-14
Posted at Bangalore GPO
Bangalore - 560 001

JUNE 2014
Date of Posting
20th or 21st of every month


## ಶಿಕ್ಷಕ ಸಮಾಚಾರ ತರಿಸಲು ಇಲಾಖೆಯ ಆದೇಶ

D.P.I. (Sepecial) ಅವರ ಆದೇಶ ಸಂಖ್ಯೆ T3-LBS-RKM-7/79-80 ದಿನಾಂಕ 20-6-1980 ರ ಪ್ರಕಾರ ರಾಜ್ಯದ ಎಲ್ಲಾ ಪ್ರಾಥಮಿಕ ಶಾಲೆಗಳು, ಹೈಸ್ಕೂಲುಗಳು, ಜ್ಯೂನಿಯರ್ ಕಾಲೇಜುಗಳು ಮತ್ತು ಶಿಕ್ಷಕರ ತರಬೇತಿ ಸಂಸ್ಥೆಗಳು (T.T.I.) ತಮ್ಮ ವಾಚನಾಲಯ ಅಥವಾ ಪುಸ್ತಕಾಲಯ ನಿಧಿಯಿಂದ "ಅಖಿಲ ಕರ್ನಾಟಕ ಶಿಕ್ಷಕ ಸಮಾಚಾರ" ಚಂದಾ ಪಾವತಿ ಮಾಡಬಹುದು.

IF UNDELIVERED PLEASE RETURN TO SENDER


Published for K.S.S.T.A. by K. Narahari
# 55, Yadavasmruthi, 1st Main, Sheshadripuram,
Bangalore - 560 020. ✆ : 080-23466495
Printed at : RASHTROTTHANA MUDRANALAYA, Bangalore - 560 019.


srushtidesigns@gmail.com